# ದೈವೀ ಸ್ಪರ್ಶ



ಅಖಿಲ ಭಾರತ ಪತ್ರಿಕೆ
ನವೆಂಬರ್ 2014

ಬೆಲೆ : 15/-



*Among the most precious things in life*
*are those you do not see with physical eyes.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ದೈವೀ ಸ್ಪರ್ಶ"

**ಅನು : ಡಾ. ಕೆ.ಎಸ್. ಆಮೂರ**
ಶ್ರೀಮಾತೆಯವರ ಪಾದಗಳು 4
ದೈವೀ ಸ್ಪರ್ಶ 21
ಮೂರ್ತರೂಪದ ದೈವೀ ಸಾನ್ನಿಧ್ಯ 28

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಶ್ರೀಮಾತೆಯವರ ಧ್ವನಿ 36

**ಅನು : ಶ್ರೀ ವೀರೇಂದ್ರ ಸಿಂಪಿ**
ಶ್ರೀಮಾತೆಯವರ ನೆಟ್ಟನೋಟ 40

**ವಾರ್ತಾಪತ್ರ** 44

ನನ್ನ ಹೃದಯದ ನಿಶ್ಚಲತೆಯಲ್ಲಿ ನಿನ್ನ ಧ್ವನಿ ಕಿವಿಗಿಂಪಾಗಿರುವ ಹಾಡಿನ ಹಾಗೆ ಕೇಳಿ ಬರುತ್ತದೆ ಮತ್ತು ಅದು ನನ್ನ ಶಿರದಲ್ಲಿ ಸಾಕಷ್ಟಾಗಿರದ, ಆದರೆ ನಿನ್ನನ್ನು ಸಮೃದ್ಧವಾಗಿ ತುಂಬಿಕೊಂಡಿರುವ ಶಬ್ದಗಳಲ್ಲಿ ತರ್ಜುಮೆಗೊಳ್ಳುತ್ತದೆ. ಮತ್ತು ಪೃಥ್ವಿಯನ್ನು ಕುರಿತು ಹೇಳಲಾಗುವ ಶಬ್ದಗಳು ಹೀಗಿವೆ:– ವೇದನೆಗೊಳಗಾದ ಬಡ ಪೃಥ್ವಿಯೆ, ನಿನ್ನಲ್ಲಿ ನನ್ನ ಸಾನ್ನಿಧ್ಯವಿದೆ ಎಂಬುದನ್ನು ನೆನಪಿನಲ್ಲಿಟ್ಟುಕೋ ಮತ್ತು ಭರವಸೆಯನ್ನು ಕಳೆದುಕೊಳ್ಳಬೇಡ, ಪ್ರತಿಯೊಂದು ಪ್ರಯತ್ನ, ದುಃಖ, ಸಂತೋಷ, ನೋವು ಮತ್ತು ನಿನ್ನ ಹೃದಯದ ಪ್ರತಿಯೊಂದು ಕರೆ, ನಿನ್ನಾತ್ಮದ ಅಭೀಪ್ಸೆ, ನಿನ್ನ ಋತುಗಳ ಪ್ರತಿಯೊಂದು ನವೀಕರಣ ಹೀಗೆ ಎಲ್ಲವೂ ಯಾವ ಅಪವಾದವಿಲ್ಲದೆ ಎಲ್ಲವೂ, ನಿನಗೆ ವೇದನಾಪೂರ್ಣವಾದದ್ದು, ಸಂತೋಷಕರವಾದದ್ದು, ಕುರೂಪವಾದದ್ದು, ಸುಂದರವಾದದ್ದು ಹೀಗೆ ಕಂಡುಬರುವುದೆಲ್ಲವೂ ನಿನ್ನನ್ನು ಖಂಡಿತವಾಗಿ ನನ್ನೆಡೆಗೆ ಕರೆತರುತ್ತದೆ, ನಾನು ಕೊನೆಯಿಲ್ಲದ ಶಾಂತಿ, ಛಾಯೆರಹಿತ ಪ್ರಕಾಶ, ಪರಿಪೂರ್ಣ ಸಾಮರಸ್ಯ, ನಿಶ್ಚಿತತೆ, ದೈವೀ ವಿಶ್ರಾಂತಿ ಮತ್ತು ಪರಮೋಚ್ಚ ಸ್ವರ್ಗಸುಖ ಇವೆಲ್ಲವುಗಳಿಂದ ಕೂಡಿಕೊಂಡವನಾಗಿದ್ದೇನೆ.

ಮೇಲೆದ್ದು ಬರುತ್ತಿರುವ ಘನತೆವೆತ್ತ ಧ್ವನಿಗೆ ಓ, ಪೃಥ್ವಿಯೇ ಕಿವಿಗೊಡು.

ಕಿವಿಗೊಡು ಹಾಗೂ ಹೊಸ ಧೈರ್ಯವನ್ನು ತಂದುಕೋ.

**(CWM, 1/14)** **– ಶ್ರೀಮಾತೆ**



ನಮ್ಮ ತುಂಡರಿಸಿರದ ವಿಶ್ವಂಭರ ಜೀವನದ ದಿವ್ಯಾನಂದ ಕರೆ ಕೊಡುತ್ತಿರುವಾಗಲೂ ನಮ್ಮ ಅತ್ಯಲ್ಪವಾದ, ಛಿದ್ರವಾದ, ರಾತ್ರಿಯಿಂದ ಹಾಗೂ ದುಃಖದಿಂದ ಮುತ್ತಿಗೆಗೆ ಒಳಗಾದ ವ್ಯಕ್ತಿಗತ ಅಸ್ತಿತ್ವಕ್ಕೆ ನಾವು ದುರಾಗ್ರಹದಿಂದ, ಮೊಂಡುತನದಿಂದ ಅಂಟಿಕೊಂಡಿರುವುದು ಭಗವಂತನ ಅತ್ಯಂತ ಆಶ್ಚರ್ಯಕರ ರಹಸ್ಯಗಳಲ್ಲಿ ಒಂದಾಗಿದೆ. ಅದಕ್ಕೆ ಸಮನಾದುದೆಂದರೆ ನಮ್ಮ ಅಹಂಕಾರದ ಛಾಯೆಯನ್ನು, ಅನಂತ ಕುರುಡುತನದಿಂದ, ನಾವು ಇಡೀ ಜಗತ್ತಿನ ಮೇಲೆ ಚೆಲ್ಲಿಕೊಡುವುದು ಮತ್ತು ಅದನ್ನು ವಿಶ್ವಂಭರ ಸತ್ತೆಯೆಂದು ಕರೆಯುವುದಾಗಿದೆ.

**(Thoughts & Aphorisms)** **– ಶ್ರೀ ಅರವಿಂದರು**

*

ಅಹಂಕಾರದ ಅಜ್ಞಾನ ಮತ್ತು ಹೆಡ್ಡತನಗಳಿಂದ ದಣಿದುಕೊಳ್ಳುತ್ತಿರುವವರೆಗೆ ನಾವು ನಮ್ಮನ್ನು ಭಗವಂತನ ಪಾದಗಳಡಿಯಲ್ಲಿ ಒರಗಿಕೊಳ್ಳುವಂತೆ ಮಾಡಿಕೊಂಡು ಅವನು ನಮ್ಮ ಏಕೈಕ ದೈವೀ ಪ್ರಭುವಾಗಲಿ ಎಂದು ಕೇಳಿಕೊಳ್ಳುತ್ತೇವೆ.

**(CWM, 10/361)** **– ಶ್ರೀಮಾತೆ**

*



# ಶ್ರೀಮಾತೆಯವರ ಪಾದಗಳು

## ಪರಿವರ್ತನೆಯ ಚಾಲಕ ಶಕ್ತಿ

**ಪ್ರಶ್ನೆ :** *ಶ್ರೀಮಾತೆಯವರೆ, ನಿಮ್ಮ ಪಾದಗಳಿಂದ ಶಕ್ತಿಯೊಂದನ್ನು ಕಳಿಸಿ–ಕೊಡಲಾಗುತ್ತದೆ ಎಂಬ ಭಾವನೆ ನನಗೆ ಬರುತ್ತಿದೆ. ನೆಲೆಗೊಳ್ಳುವಂತೆ ಮಾಡುವ ಪ್ರಕಾಶದ ಕಿರಣಗಳಿಂದ ಮತ್ತು ಶಾಂತಿಯಿಂದ ಅದು ಕ್ರಿಯಾಶೀಲವಾಗಿದೆ ಇಲ್ಲವೆ ಅದಕ್ಕೂ ಹೆಚ್ಚಾಗಿ ಪ್ರೇರಕ ಶಕ್ತಿಯಾಗಿದೆ. ಸಾಂತ್ವನಗೊಳಿಸುವ ಮತ್ತು ಮಾಧುರ್ಯದಿಂದಿರುವ ನಿಮ್ಮ ಪಾದಗಳು ಸತ್ತೆಗೆ ಸೌಖ್ಯವನ್ನು ತಂದುಕೊಡುವಂತಿವೆ. ಶ್ರೀಮಾತೆಯವರೆ, ಅದೇ ವೇಳೆಗೆ ನಾವು ಹಲವಾರು ವಿಷಯಗಳ ಬಗ್ಗೆ ಭಾವನೆ ತಂದುಕೊಳ್ಳುವಂತಾಗುತ್ತದೆ. ಆದರೆ ಅತಿ ಮಹತ್ವದ್ದಾದ ವಿಷಯವೆಂದರೆ ಆ ಶಕ್ತಿ ಬಹಳ ಕ್ರಿಯಾಶೀಲವಾಗಿದೆ ಮತ್ತು ಬಲವತ್ತರವಾಗಿದೆ ಎಂಬುದು.*

**ಶ್ರೀಮಾತೆ :** ಹೌದು ಮಗು. ಅದು ನಿಖರವಾಗಿ ಹಾಗಿದೆ; ಏಕೆಂದರೆ ಅದು ಪರಿವರ್ತನೆಗೊಳಪಡಿಸುವ ಶಕ್ತಿ, ಆ ಕಾರಣದಿಂದಾಗಿ ಅದು ಚಾಲಕ ಶಕ್ತಿಯಾಗಿದೆ. ಅಚೇತನದ ಮೊತ್ತವನ್ನು ಪ್ರಕಾಶಿತಗೊಳಿಸುವುದಕ್ಕಾಗಿ, ತಮಸ್ಸನ್ನು ಉದ್ದೀಪನ–ಗೊಳಿಸುವುದಕ್ಕಾಗಿ ಅಲ್ಲಿ ಒಳನುಗ್ಗುವ ಪ್ರಕಾಶವಿದೆ, ಆ ಅಚೇತನ ಪ್ರಜ್ಞೆಯುಳ್ಳದ್ದಾಗುವಂತೆ ಮಾಡುವುದಕ್ಕಾಗಿ ಸಂತೋಷವಿದೆ. ಈ ಘನರೂಪದ, ಮಬ್ಬಾದ ಮತ್ತು ಬಿರುಸಾದ ಭೌತದ್ರವ್ಯದಲ್ಲಿ ಈ ಶಕ್ತಿ ಒಳನುಗ್ಗಬೇಕು, ಆ ಭೌತದ್ರವ್ಯ ತನ್ನ ವಿರೂಪಗೊಳ್ಳುವಿಕೆಯಲ್ಲಿ ಹಟಮಾರಿಯಾಗಿದೆ ಮತ್ತು ಮಿಥ್ಯೆಯಲ್ಲಿ ಮುಳುಗಿ ಹೋಗಿದೆ. ಅಚೇತನದ ಮೊತ್ತವಿರುವ ಇದರ ತಳ ಬುಡದಲ್ಲಿ ಹಾಗೂ ಈ ಶಾಶ್ವತ ಮಬ್ಬಿನಲ್ಲಿ ಪ್ರಕಾಶವನ್ನು ತರುವುದಕ್ಕಾಗಿ ಆ ಶಕ್ತಿಯಿದೆ; ಈ ಮಬ್ಬು ತನ್ನ ಭವ್ಯ ಹಾಗೂ ಒಳನುಗ್ಗಲು ಆಸ್ಪದಕೊಡದ ಶಕ್ತಿಗಳ ಸಾಮರ್ಥ್ಯದೊಂದಿಗೆ ಆ ಶಕ್ತಿಯನ್ನು ವಿರೋಧಿಸುತ್ತದೆ. ಭೌತದ್ರವ್ಯದಲ್ಲಿ ಅದರ ಹಲವಾರು ಹಗ್ಗಗಳಿಂದ ಬಂಧನಕ್ಕೊಳಗಾದ ದೈವೀ ಸಾನ್ನಿಧ್ಯವಿದೆ, ಅದು ಅಲ್ಲಿ ರಹಸ್ಯ ಸಾಮರ್ಥ್ಯವೊಂದರ ಸೆರೆಗೊಳಗಾಗಿದೆ, ಆ ಸೆರೆಯಿಂದ ಮುಕ್ತವಾಗುವುದು ಬಹಳ ಕಠಿಣವಾಗಿದೆ. ಯಾವುದೂ ಚಲಿಸಲಾಗದ, ಎಂದಿಗೂ ಚಲಿಸಲು ಸಾಧ್ಯವಾಗದ ಅಚೇತನದ ಆಳಗಳಲ್ಲಿ ಕುರುಡು ಒತ್ತಾಯಕ್ಕೊಳಗಾಗಿ ಆ ಸಾನ್ನಿಧ್ಯ ನಿಶ್ಚಲವಾಗಿ ಭೌತದ್ರವ್ಯದಲ್ಲಿ

ವಿಶ್ರಾಂತಿಯ ಸ್ಥಿತಿಯಲ್ಲಿದೆ; ಅಲ್ಲಿ ಅಜೇಯ ಶಕ್ತಿಯಿಂದ ವಿರೋಧ ವ್ಯಕ್ತಪಡಿಸುವ ಪ್ರತಿರೋಧದಲ್ಲಿ ಪ್ರತಿಯೊಂದೂ ಮಾಯವಾಗುತ್ತದೆ. ಭೌತದ್ರವ್ಯ ನನ್ನ ಸಾನ್ನಿಧ್ಯದ ಬಗ್ಗೆ ಹಾಗೂ ಹರಡಿಕೊಳ್ಳುತ್ತಿರುವ ಪ್ರಕಾಶದ ಬಗ್ಗೆ ಹೆಚ್ಚು ಪ್ರಜ್ಞೆಯುಳ್ಳದ್ದು ಆಗುವಂತೆ, ಅದನ್ನು ಭಾವನೆಗೆ ತಂದುಕೊಳ್ಳುವಂತೆ ಆಗುವವರೆಗೆ ಪರಿವರ್ತನೆ–ಗೊಳಪಡಿಸುವ ಶಕ್ತಿ ಪೋಷಿಸಿಕೊಂಡು ಬರುವ ಸಾಮರ್ಥ್ಯದೊಂದಿಗೆ ಕಾರ್ಯ ಕೈಕೊಳ್ಳಬೇಕು, ಭೌತದ್ರವ್ಯದ ಹೃದಯದಲ್ಲಿಯೇ ಪ್ರಕಾಶ ಒಳನುಗ್ಗುವವರೆಗೆ ಅದು ಕೆಳಗೆ ಹೋಗುವಂತೆ ನಾನು ಬಲವಂತಪಡಿಸುತ್ತೇನೆ.

ನಾನು ಪೃಥ್ವಿಯ ಮೇಲೆ, ಎಲ್ಲೆಡೆಯಲ್ಲಿ ಇರಿಸಿದ ಪ್ರತಿಯೊಂದು ಹೆಜ್ಜೆಯಲ್ಲಿ ಪರಿವರ್ತನೆಗೆ ಒಳಪಡಿಸುವ ಈ ಶಕ್ತಿಯನ್ನು ಹಾಗೂ ಪ್ರಕಾಶವನ್ನು, ನನ್ನ ಕಾಲುಗಳ ಕೆಳಗಿರುವ ಭೌತದ್ರವ್ಯದ ಅಣು ಹಾಗೂ ಪರಮಾಣುಗಳಲ್ಲಿ ಒತ್ತಿ ತುಂಬಿದ್ದೇನೆ. ನಾನು ಪೃಥ್ವಿಯ ಮೇಲೆ ಇರಿಸಿದ ಪ್ರತಿಯೊಂದು ಹೆಜ್ಜೆ ಕಂಪನಗಳನ್ನು ಕಳಿಸಿಕೊಟ್ಟಿದೆ, ಆ ಕಂಪನಗಳು ಧ್ವನಿ ತರಂಗಗಳನ್ನು, ಪ್ರತಿಧ್ವನಿಯನ್ನು ಅಚೇತನದ ಸುಪ್ತಾವಸ್ಥೆಯಲ್ಲಿ ನಿದ್ರಿಸುತ್ತಿರುವ ಭೌತದ್ರವ್ಯದ ಜಡತ್ವದಲ್ಲಿ ಉತ್ಪಾದಿಸುತ್ತವೆ, ಅದರಿಂದಾಗಿ ಪೃಥ್ವಿಯನ್ನು ಆ ಕಂಪನಗಳ ಸಾಮರಸ್ಯದ ಒಂದು ಲಯಬದ್ಧತೆಗೆ ಹಾಗೂ ಸೌಂದರ್ಯ, ಸತ್ಯಗಳ ಪ್ರಜ್ಞೆಗೆ ಎಚ್ಚತ್ತುಕೊಳ್ಳುವಂತೆ ಮಾಡಲಾಯಿತು. ...

... ಸದ್ಯ ಭಯಾನಕ ಗಳಿಗೆಗಳಲ್ಲಿ ಮನುಷ್ಯ ಕ್ಷೀಣ ಧ್ವನಿಯೊಂದನ್ನು ಕೇಳುತ್ತಾನೆ, ಪೃಥ್ವಿಯಲ್ಲಿ ನಡುಗಿರುವುದನ್ನು ಗ್ರಹಿಸುತ್ತಾನೆ, ಎಚ್ಚರಗೊಳಿಸುವ ದೈವತ್ವದ ಬಗ್ಗೆ, ಪರಮಾಣುಗಳ ಆಳಗಳಿಂದ ಉಕ್ಕಿ ಬರುತ್ತಿರುವ ಪ್ರಕಾಶಕ್ಕಾಗಿರುವ ಗಾಢ ಅಭೀಪ್ಸೆಯ ಬಗ್ಗೆ ಭಾವನೆ ತಂದುಕೊಳ್ಳುತ್ತಾನೆ.

**ಉಪಕಾರ ಬುದ್ಧಿಯ ದೈವೀ ಕೃಪೆ; ಸಾರ್ವಭೌಮ ದೈವೀ ಶಾಂತಿ**

ಎಂತಹ ಉಪಕಾರ ಬುದ್ಧಿಯ ದೈವೀ ಕೃಪೆ! ಎಂತಹ ಸಾರ್ವಭೌಮ ದೈವೀ ಶಾಂತಿ! ಪರಮಾಣುಗಳಲ್ಲಿ ವಾಸಿಸುವ, ಪೀಡೆಗೊಳಗಾದ ಅಸ್ತಿತ್ವಗಳಿಗೆ ಎಂತಹ ಸಮಾಧಾನ! ಎಂತಹ ಸ್ವರ್ಗಸುಖ ನೀಡುವ ಗಳಿಗೆ! ಏಕೆಂದರೆ ಧೂಳಿನ ಈ ಕಣಗಳ ಮೇಲೆ ನಾನು ನನ್ನ ಹೆಜ್ಜೆಗಳನ್ನಿರಿಸಿದ್ದೇನೆ. – ಅವುಗಳನ್ನು ಜಯಗಳಿಸುವ ಸಾಮರ್ಥ್ಯದಿಂದ ಮತ್ತು ಪರಿವರ್ತನೆಗೊಳಪಡಿಸುವ ಪ್ರಕಾಶದಿಂದ ಸ್ಪರ್ಶಿಸಲಾಗಿದೆ



ಮತ್ತು ಮೊದಲು ಅವು ಒಂದು ಸಮತೋಲನವನ್ನು ತರಲು, ನಂತರ ಈ ಕರುಣೆಯನ್ನು ಹರಡಲು ಪ್ರಯತ್ನಿಸುತ್ತವೆ ಮತ್ತು ಅವು ತಮ್ಮ ನೆರೆಹೊರೆಯಲ್ಲಿ ಗಲಭೆಯಲ್ಲಿ ಇದ್ದವುಗಳನ್ನು ಬದಲು ಮಾಡಲು ಕ್ರಿಯಾಶೀಲವಾಗಿವೆ, ವಾತಾವರಣದಲ್ಲಿಯ ಅಸ್ತವ್ಯಸ್ತತೆಯಿಂದ ಉಂಟಾದ ಗಲಭೆಯಿಂದಾಗಿ ನೆರೆಹೊರೆಯಲ್ಲಿದ್ದ ಅವು ಶಾಂತಿಭಂಗಕ್ಕೊಳಗಾಗಿದ್ದವು.

ನಾನು ನಡೆದಾಡಿದಲ್ಲೆಲ್ಲ, ನನ್ನ ಹೆಜ್ಜೆ ಇರಿಸಿದಲ್ಲೆಲ್ಲ, ಪೃಥ್ವಿಯ ಮೇಲೆ ನಮ್ಮ ಪಾದಗಳು ಸ್ಪರ್ಶಿಸಿದಲ್ಲೆಲ್ಲ ಇದ್ದ ನೆಲ ಪವಿತ್ರವಾಗಿದೆ, ಪರಿಶುದ್ಧವಾಗಿದೆ, ಮತ್ತು ನಮ್ಮ ಸ್ಪರ್ಶವನ್ನು, ನಾವು ಕಳಿಸಿಕೊಟ್ಟ ಪರಿವರ್ತನೆಗೊಳಪಡಿಸುವ ಶಕ್ತಿಯನ್ನು ಸ್ವೀಕರಿಸುವಂತಾಗಿದೆ; ಅಚೇತನದ ಆಳಗಳ ಮಧ್ಯದಲ್ಲಿ ಕಾರ್ಯ ಮಾಡಲೆಂದು ನಮ್ಮಿಂದ ಹೊರಹರಿದು ಬಂದ ಆ ಶಕ್ತಿಯನ್ನು ಕಳಿಸಿಕೊಡಲಾಗಿತ್ತು. ನಮ್ಮಿಂದ ಹೊರಬಂದ ಪ್ರಕಾಶ, ಲಕ್ಷಾನುಗಟ್ಟಲೆ ವರ್ಷಗಳ ಕಾಲದಿಂದ ಗಲಭೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಈ ಚಿಕ್ಕ ಕಣಗಳು ಹೊಸ ಪ್ರಜ್ಞೆಗೆ ಹಾಗೂ ಅಜ್ಞಾತ ದಿವ್ಯಾನಂದದ ಕಂಪನಗಳಿಗೆ ಎಚ್ಚತ್ತುಕೊಳ್ಳುವಂತೆ ಮಾಡಿದೆ. ಅವು ಈ ಪ್ರಜ್ಞೆಯನ್ನು ಹಾಗೂ ಆನಂದವನ್ನು ಉಳಿಸಿಕೊಂಡಿವೆ ಮತ್ತು ತಮ್ಮ ಸುತ್ತಮುತ್ತಲೆಲ್ಲ ಅವುಗಳನ್ನು ಪರಿಣಾಮಕಾರಿಯಾಗುವ ರೀತಿಯಲ್ಲಿ ಹರಡಿವೆ – ಅದು ದೈವೀ ಮಾಧುರ್ಯವನ್ನು ಗರ್ಭದಲ್ಲಿ ಧರಿಸಿದ ಪ್ರಭಾವವೊಂದರ ಮೂಲಕ ಆ ಪ್ರಜ್ಞೆ ಹಾಗೂ ಆನಂದಗಳನ್ನು ಈ ಅಣುಗಳಲ್ಲಿ ತುಂಬುತ್ತಿರುವ ಹಾಗಿತ್ತು. ನಾನು ಪೃಥ್ವಿಯ ಆತ್ಮವನ್ನು ಸ್ಪರ್ಶಿಸಿದ್ದೇನೆ, ಅದು ನನ್ನನ್ನು ಕೃತಜ್ಞತೆಯಿಂದ ಪುರಸ್ಕರಿಸುತ್ತದೆ, ಆ ಕೃತಜ್ಞತೆ ತನ್ನನ್ನು ಹೋಲಿಸಲಾಗದ ಶರಣಾಗತಿಯಿಂದ ಸುರಿಯುತ್ತದೆ ಮತ್ತು ಇನ್ನೂ ಹೆಚ್ಚಾಗಿ ಅದನ್ನು ಎಲ್ಲ ಬಂಧನದಿಂದ ಮುಕ್ತಗೊಳಿಸಲು ನನಗೆ ಆಹ್ವಾನ ನೀಡುತ್ತದೆ...

ನಾನು ಹೆಜ್ಜೆ ಇರಿಸಿರುವ ಎಲ್ಲೆಡೆಯಲ್ಲಿ ಪರಿವರ್ತನೆಯ ಶಕ್ತಿಯ ಕ್ರಿಯೆಯಿದೆ, ಅದು ಪೃಥ್ವೀ ಪ್ರಜ್ಞೆ ಕಂಪಿಸುವಂತೆ ಮಾಡುತ್ತದೆ. ಈ ಮಬ್ಬಾದ, ಘನರೂಪದ ಅಚೇತನದಲ್ಲಿ – ಈ ಅಜ್ಞಾನದ ಮೊತ್ತ ಹಾಗೂ ಎಂದಿಗೂ ಪ್ರಕಾಶ ಕಂಡಿರದ, ಒಳ ನುಗ್ಗಲಾಗದ ತಮಸ್ಸಿನಲ್ಲಿ – ಈಗ ಮನುಷ್ಯ ಕೊನೆಗೊಮ್ಮೆ ಸ್ಪಷ್ಟವಾಗುವಿಕೆಯನ್ನು ನೋಡುತ್ತಾನೆ, ಈ ಚಿಕ್ಕ ಮೊತ್ತದಲ್ಲಿ ಪ್ರಕಾಶದ ಕಿರಣ ಪ್ರಜ್ವಲಿಸುತ್ತಿರುವುದನ್ನು ಕಾಣುತ್ತಾನೆ. ಬೀಜಾಣುಗಳ ಆಳದಲ್ಲಿಯೆ ನಾನು ಜ್ವಾಲೆಯೊಂದು ಪ್ರಜ್ವಲಿಸುವಂತೆ

ಮಾಡಿದ್ದೇನೆ. ಅಜ್ಞಾನದ ಮಬ್ಬಿನ ಶಾಶ್ವತತೆಯಲ್ಲಿರುವ ಹಾಗಿದ್ದ ಶಕ್ತಿಗಳ ಚಲಿಸಲಾಗದ ಸುತ್ತುವಿಕೆಯಲ್ಲಿ ಸೆರೆಗೊಳಗಾದ ಅಚೇತನದ ಜಡ ಮೊತ್ತದಲ್ಲಿ ಆ ಜ್ವಾಲೆ ತನ್ನ ಕಂಪನದೊಂದಿಗೆ ಎಚ್ಚರಿಕೆ ತಂದುಕೊಡುತ್ತದೆ. ಅದು ಏನೂ ಇಲ್ಲದ ಜಗತ್ತೊಂದನ್ನು ತೆರೆದು ತೋರಿಸುತ್ತದೆ. ಭೌತದ್ರವ್ಯದ ಈ ಕುರುಡು ಪ್ರಾಂತಗಳಲ್ಲಿ ಆ ಜಗತ್ತು ಜಡವಾಗಿ, ಮೂಕವಾಗಿ, ಜೀವನರಹಿತ ಆಳವಾದ ನಿದ್ದೆಯಲ್ಲಿ ಒರಗಿಕೊಂಡಿತ್ತು, ಅಲ್ಲಿ ಪರಮೋಚ್ಚ ಸಂಕಲ್ಪದಿಂದ ಹೊರಹೊರಟ ಕಂಪನವೊಂದು ಬರುತ್ತದೆ ಮತ್ತು ಭೌತದ್ರವ್ಯ ಅದರಿಂದ ನಡುಗುತ್ತದೆ, ತತ್ತರಿಸುತ್ತದೆ ಮತ್ತು ದಿವ್ಯಾನಂದದಲ್ಲಿ ಎಚ್ಚತ್ತುಕೊಳ್ಳುತ್ತದೆ.

**ಪೃಥ್ವಿ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತದೆ:**

... ನಾನು ಪೃಥ್ವಿಯ ಮೇಲೆ ನಡೆದಾಡಿದೆ ಎಂಬ ವಾಸ್ತವತೆಯಿಂದಾಗಿ ಉಂಟಾದ ರೂಪಪರಿವರ್ತನೆಯ ಪರಿಣಾಮವನ್ನು ಅದು ಕೃತಜ್ಞತೆಯಿಂದ ಉಳಿಸಿಕೊಳ್ಳುತ್ತದೆ, ಆ ಕಾರಣದಿಂದಾಗಿ ಅದು (ಪೃಥ್ವಿ) ತನ್ನನ್ನು ಅವರ್ಣನೀಯ ಸಂತೋಷದಲ್ಲಿ ಅಭಿವ್ಯಕ್ತಪಡಿಸುತ್ತದೆ. ...

... ನಮ್ಮ ಹೆಜ್ಜೆಗಳನ್ನು ಇರಿಸಿದ ಹಾಗೂ ಹೆಜ್ಜೆ ಗುರುತುಗಳನ್ನು ಹಿಂದೆ ಬಿಟ್ಟು ಬಂದ ಸ್ಥಳದಲ್ಲಿ ಇರುವ ಅಣುಗಳು ತಮ್ಮ ಹತ್ತಿರವಿರುವ ಇತರ ಅಣುಗಳ ಮೇಲೆ ಪ್ರಕಾಶ ಬೀರುತ್ತವೆ, ಅವುಗಳನ್ನು ತಮ್ಮ ಪ್ರಭಾವಕ್ಕೊಳಗಾಗುವಂತೆ ಮಾಡುತ್ತವೆ ಮತ್ತು ಈ ರೀತಿಯಾಗಿ ರೂಪಪರಿವರ್ತನೆಯ ಕಾರ್ಯ ಕಡಿಮೆಯಾಗದೆ ಮುಂದುವರಿದುಕೊಂಡು ಹೋಗುತ್ತದೆ.

ನೀನು ಹೇಳಿದ್ದು ಸರಿಯಾಗಿದೆ, ನನ್ನ ಪಾದಗಳಿಂದ ಹೊರಹೊಮ್ಮುವ ಶಕ್ತಿಗೆ ಹೆಚ್ಚಿನ ಗಾಢತೆಯಿದೆ, ಈ ಶಕ್ತಿ ಪೃಥ್ವಿಯ ಮೇಲಿನ ದಟ್ಟವಾದ ಗಟ್ಟಿ ಪದರಿನ ಮೂಲಕ, ಹೆಚ್ಚಿನ ಪ್ರತಿರೋಧವನ್ನು ಎದುರಿಸಿ ಸಾಗಿ ಹೋಗಬೇಕಾಗುತ್ತದೆ, ಅದರಿಂದಾಗಿ ಅದು ಅಚೇತನವನ್ನು ತಲುಪಲು ಹಾಗೂ ಸ್ಪರ್ಶಿಸಲು ಸಾಧ್ಯವಾಗುತ್ತದೆ, ಈ ಕಾರಣದಿಂದಾಗಿಯೇ ಆ ಶಕ್ತಿ ನೇರವಾಗಿ ಸಾಗುತ್ತದೆ. ಅದು ಹಾಗಿರುವಾಗ, ನನ್ನ ಕೈಯಿಂದ ಆಶೀರ್ವದಿಸಿದಾಗ ಆ ಶಕ್ತಿಯ ಪ್ರವಾಹವನ್ನು ನಿಯಂತ್ರಿಸುತ್ತೇನೆ ಮತ್ತು ಪ್ರತಿಯೊಬ್ಬನಿಗೆ ಅವನ ಆವಶ್ಯಕತೆಗನುಗುಣವಾಗಿ ಆಶೀರ್ವಾದ ನೀಡುತ್ತೇನೆ. ಶ್ರೀ ಅರವಿಂದರು ಆಶೀರ್ವದಿಸುತ್ತಿದ್ದ ರೀತಿ



ಭಿನ್ನವಾಗಿತ್ತು: ದೂರದಲ್ಲಿದ್ದುಕೊಂಡು ತಮ್ಮ ಶಕ್ತಿಯನ್ನು ರೋಗ ನಿವಾರಣೆಗಾಗಿ, ಪ್ರಜ್ಞೆಯನ್ನು ಮೇಲೆತ್ತಿ ಹಿಡಿಯುವುದಕ್ಕಾಗಿ, ಆಶೀರ್ವಾದ ನೀಡುವುದಕ್ಕಾಗಿ ನೇರವಾಗಿ ಕಳಿಸಿಕೊಡುತ್ತಿದ್ದರು. – ನಾನು ಅಂತಹ ಹಲವಾರು ನಿದರ್ಶನಗಳನ್ನು ನೋಡಿದ್ದೇನೆ – ಅವರು ಯಾರನ್ನೂ ಸ್ಪರ್ಶಿಸದೆ ಆ ಕಾರ್ಯ ಕೈಕೊಳ್ಳುತ್ತಿದ್ದರು. ನನ್ನ ವಿಧಾನವನ್ನು ಕುರಿತು ಹೇಳುವುದಾದರೆ ಆಶೀರ್ವದಿಸುವುದನ್ನು ಸ್ವಲ್ಪ ಮಟ್ಟಿಗೆ ಸೀಮಿತಗೊಳಿಸುತ್ತೇನೆ, ಮತ್ತು ಜನರ ಸ್ವೀಕೃತಿಯ ಪರಿಮಾಣಕ್ಕೆ ನಿಖರವಾದಷ್ಟನ್ನು ಕೊಡುತ್ತೇನೆ, ಅದರಿಂದಾಗಿ ಅವರು ಅದನ್ನು ಒಳಗೊಳ್ಳಲು, ಜೀರ್ಣಿಸಿಕೊಳ್ಳಲು ಶಕ್ತರಾಗುತ್ತಾರೆ. ನಾನು ವ್ಯಕ್ತಿಯ ಕ್ಷಮತೆಗನುಗುಣವಾಗಿ ಕೊಡುತ್ತೇನೆ, ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ, ಮತ್ತು ಅವರು ಸಂತುಷ್ಟರಾಗಿರುತ್ತಾರೆ. ಆದರೆ ಜಗತ್ತಿನ ಇನ್ನೊಂದು ತುದಿಯಲ್ಲಿರುವಷ್ಟು ದೂರದಿಂದ ಜನರ ಕರೆ ಬಂದಾಗ – ಅವರು ಇನ್ನೊಂದು ತುದಿಯಲ್ಲಿದ್ದಾಗ ಕೆಲವೊಮ್ಮೆ ಗಾಢವಾದ ಚೈತನ್ಯದೊಂದಿಗೆ ಕೊಡುವ ನಿರ್ಬಂಧಕ್ಕೊಳಗಾಗುತ್ತೇನೆ. ನಾನೊಂದು ಪ್ರಾರ್ಥನೆ ಕೇಳಿಸಿಕೊಂಡಾಗ ಶಕ್ತಿಯನ್ನು, ಸಂಕಲ್ಪವನ್ನು ಕಳಿಸಿಕೊಡುತ್ತೇನೆ, ಅದು ಸಾಕಷ್ಟು ಗಾಢತೆಯೊಂದಿಗೆ ಅವಶ್ಯವಾದದ್ದನ್ನು ಕೈಕೊಳ್ಳುತ್ತದೆ ಇಲ್ಲವೆ ಆ ವ್ಯಕ್ತಿಗೆ ರಕ್ಷಣೆ ನೀಡುತ್ತದೆ. ಅದು ನನ್ನಿಂದ ಹೊರಹೊಮ್ಮುವ ಕಂಪನವಾಗಿದ್ದು ಜಗತ್ತಿನ ಇನ್ನೊಂದು ತುದಿಯಷ್ಟು ದೂರದಲ್ಲಿಯೂ ಕೂಡ ಕ್ಷಣಾರ್ಧದಲ್ಲಿ, ನಿಯತಿವಾದದೊಂದಿಗೆ, ಕಾರ್ಯ ಕೈಕೊಳ್ಳುತ್ತದೆ. ಆ ಕ್ಷಣದಲ್ಲಿ ಅದು ಸ್ವಯಂಚಾಲಿತವಾಗಿದ್ದು ನಾನು ಆ ಕಂಪನದಲ್ಲಿ ಇರಿಸಿರುವ ಸಂಕಲ್ಪವನ್ನು ಈಡೇರಿಸುತ್ತದೆ. ನಿಜ ಹೇಳುವುದಾದರೆ ಅದು ನಾನು ಕಳಿಸುವ ಬಲವತ್ತರವಾದ ಶಕ್ತಿಯಾಗಿರುತ್ತದೆ – ಅದು ಅವನನ್ನು ಮೃತ್ಯುವಿನಿಂದ ಕೂಡ ರಕ್ಷಿಸಬಲ್ಲದು. ಆದರೆ ಅಷ್ಟು ಗಾಢವಾದ ಶಕ್ತಿಯನ್ನು ನಾನು ಮೇಲಿಂದ ಮೇಲೆ ಕಳಿಸಿಕೊಡುವುದಿಲ್ಲ.

(ಸ್ವಲ್ಪ ಕಾಲದ ನಂತರ) ಆದರೆ ನೀನು ತಿಳಿದುಕೊಳ್ಳಬೇಕಾದುದೆಂದರೆ ನಾನು ಅಲ್ಲಿ ಮೇಲ್ಗಡೆ ನಿನ್ನ ತಲೆಯ ಮೇಲೆ (ಶ್ರೀಮಾತೆಯವರು ಸನ್ನೆ ಮಾಡಿ ತೋರಿಸುತ್ತಾರೆ) ಅಲ್ಲಿ ನೀನು ದ್ವಾರವನ್ನು ತೆರೆದಿರಿಸಿರುತ್ತೀ, ಅದರಿಂದಾಗಿ ನಾನು ಸಂಪೂರ್ಣವಾಗಿ ನಿನ್ನೊಂದಿಗೆ ತಾದಾತ್ಮ್ಯದಿಂದಿರಲು ಪ್ರವೇಶಿಸುತ್ತೇನೆ. ಮತ್ತು ನಂತರ ಪ್ರತಿಯೊಂದನ್ನು ನಿನ್ನಲ್ಲಿ ಕೈಕೊಳ್ಳುತ್ತೇನೆ. ಅದಕ್ಕಾಗಿ ನೀನು ಪರಿಶುದ್ಧನಾಗಿರಬೇಕು, ನಿಷ್ಕಪಟನಾಗಿರಬೇಕು ಮತ್ತು ಚೈತ್ಯಸತ್ತೆ ಮುಂಭಾಗಕ್ಕೆ

ಬಂದಿರಬೇಕು, ನಿನ್ನ ಜೀವನದ ಮೇಲೆ ಆಳಿಕೆ ನಡೆಸುತ್ತಿರಬೇಕು. ನಿನ್ನ ಎಲ್ಲ ಕ್ರಿಯೆಗಳು ನಿನ್ನ ಆಳಾತಿ ಆಳದ ಸತ್ತೆಯ, ನಿನ್ನ ಆಂತರಿಕ ಜೀವನದ ಅಭಿವ್ಯಕ್ತಿಯಾಗಿರಬೇಕು. ಆಗ ನನ್ನ ಪ್ರಕಾಶ ಮೇಲ್ಗಡೆಯಿಂದ ಒಳನುಗ್ಗಲು ಮತ್ತು ನಿನ್ನ ಚೈತ್ಯಸತ್ತೆಯೊಂದಿಗೆ ಸಹಭಾಗಿಯಾಗಲು ಮತ್ತು ನಿನ್ನ ಪ್ರಜ್ಞೆಯಲ್ಲಿ ಮೂಲಭೂತ ಬದಲಾವಣೆಯನ್ನು ಉಂಟುಮಾಡಲು ಶಕ್ತವಾಗುತ್ತದೆ.

ಪರಮೋಚ್ಚವಾದದ್ದು (The Supreme), ಶ್ರೀಮಾತೆಯವರೊಂದಿಗೆ ಮಾತುಕತೆಗಳು ಮೋನಾ ಸರ್ಕಾರ ನೆನಪಿನಿಂದ ದಾಖಲಿಸಿದ್ದು. 1st ed. pp 59-69.

*

**ದೈವೀ ಪ್ರಭುವಿನ ಪಾದಗಳಲ್ಲಿ ಶರಣಾಗುವುದರಲ್ಲಿರುವ ಸಂತೋಷ**

**ಪ್ರಶ್ನೆ :** *ನಾನು ಸರಿಯಾದ ಚಲನೆ ಮಾಡುತ್ತಿರುವೆನೇ ಎಂಬುದು ನನಗೆ ತಿಳಿಯದು.*

**ಶ್ರೀಮಾತೆ :** (ಸ್ವಲ್ಪ ಕಾಲ ಮೌನದಲ್ಲಿದ್ದ ನಂತರ) ಆದರೆ ನೀನು ಭಗವಂತನೊಡನೆ ಸಂಪರ್ಕದಲ್ಲಿ ಪ್ರವೇಶಿಸಬೇಕೆಂದು ಬಯಸಿದಾಗ ಯಾವ ಚಲನೆಯನ್ನು ಮಾಡುವಿ?

**ಪ್ರಶ್ನೆ :** *ನಾನು ನನ್ನನ್ನು ನಿಮ್ಮ ಚರಣಗಳಡಿಯಲ್ಲಿ ಇರಿಸುತ್ತೇನೆ.*

(ಶ್ರೀಮಾತೆಯವರು ಮುಗುಳ್ನಗುತ್ತಾರೆ ಮತ್ತು ತಮ್ಮಂತರಂಗದತ್ತ ಹೊರಳುತ್ತಾರೆ.)

ಯೋಗ್ಯರಾಗಿಲ್ಲವೆಂಬ ಭಾವನೆ ನಿಮ್ಮನ್ನು ತುಂಬಿಕೊಂಡಾಗ ಹಾಗೂ ತಡೆಯಲಾರದ ಕೃತಜ್ಞತೆಯೊಂದಿಗೆ ನಿಮ್ಮನ್ನು ಶ್ರೀ ಅರವಿಂದರ ಚರಣಗಳತ್ತ ದಿವ್ಯಾನಂದದಿಂದ ಚೆಲ್ಲಿಕೊಟ್ಟಾಗ ಅದು ನಿಜವಾದ ಮೂಲದಿಂದ ಬಂದಿರುತ್ತ–ದೆಂದು ತಿಳಿದುಕೊಳ್ಳಬೇಕು; ತದ್ವಿರುದ್ಧವಾಗಿ, ಅದು ನಿಮ್ಮನ್ನು ದುಃಖಿತರನ್ನಾಗಿ ಮಾಡಿದರೆ ಮತ್ತು ಅಡಗಿಕೊಳ್ಳುವ ಇಲ್ಲವೆ ದೂರ ಓಡಿಹೋಗುವ ಪ್ರಚೋದನೆಯನ್ನು ತಂದರೆ ಆಗ ಅದು ವಿರೋಧೀ ಮೂಲದಿಂದ ಬಂದಿತೆಂಬುದರ ಬಗ್ಗೆ ನಿಶ್ಚಿತತೆ ಹೊಂದಿರಬೇಕು. ಮೊದಲನೆಯದಕ್ಕೆ ನೀನು ಮುಕ್ತನಾಗಿ ತೆರೆದುಕೊಳ್ಳಬೇಕು; ಎರಡನೆಯದನ್ನು ತಿರಸ್ಕರಿಸಬೇಕು.

**(CWM, 11/330, 14/235)**

*



**ಅಹಂಕಾರವನ್ನು ಕರಗಿಸುವುದಕ್ಕಾಗಿ ಒಂದು ವಿಧಾನ:**

ಭಗವಂತನಿಗೆ ಸ್ವ–ಸಮರ್ಪಣ ಮಾಡಿಕೊಳ್ಳುವುದಕ್ಕಾಗಿ ಮೂರು ಮಾದರಿಯ ರೀತಿಗಳು –

1. ಮನುಷ್ಯ ಎಲ್ಲ ಅಭಿಮಾನ ತೊರೆದು ವಿನಮ್ರತೆಯಿಂದ ಭಗವಂತನ ಪಾದಗಳ ಬಳಿ ಸಾಷ್ಟಾಂಗ ನಮಸ್ಕಾರ ಮಾಡುವುದು.
2. ಮನುಷ್ಯ ತನ್ನ ಸತ್ತೆಯನ್ನು ಹಾಗೂ ಅಡಿಯಿಂದ ಮುಡಿಯವರೆಗೆ ದೇಹವನ್ನು, ತೆರೆದಿಟ್ಟ ಪುಸ್ತಕದ ಹಾಗೆ, ತೆರೆದಿರಿಸುವುದು, ತನ್ನ ಎಲ್ಲ ಕೇಂದ್ರಗಳನ್ನು ಬಯಲಿಗಿರಿಸುವುದು, ಅದರಿಂದಾಗಿ ಏನನ್ನೂ ಬಚ್ಚಿಡದಂತೆ ಸಂಪೂರ್ಣ ನಿಷ್ಕಾಪಟ್ಯದಿಂದ ಎಲ್ಲ ಚಲನೆಗಳು ಗೋಚರಿಸುವಂತೆ ಮಾಡುವುದು.
3. ಪ್ರೀತಿಪೂರ್ವಕವಾಗಿ ಮತ್ತು ಸಂಪೂರ್ಣ ವಿಶ್ವಾಸದೊಂದಿಗೆ ಭಗವಂತನ ತೋಳುಗಳಲ್ಲಿ ಬೆಚ್ಚಗಿರುವಂತೆ ಒಳದೂರಿಸಿಕೊಳ್ಳುವುದು.

ಈ ಚಲನೆಗಳು ತಮ್ಮೊಂದಿಗೆ ಮೂರು ಸೂತ್ರಗಳನ್ನು ಇಲ್ಲವೆ ಸಂದರ್ಭ–ಕ್ಕನುಸಾರವಾಗಿ ಒಂದು ಚಲನೆಯನ್ನು ತಮ್ಮೊಂದಿಗೆ ಇರಿಸಿಕೊಂಡಿರಬೇಕು:

1. ನನ್ನ ಸಂಕಲ್ಪದಂತಲ್ಲ, ನಿನ್ನ ಸಂಕಲ್ಪದಂತಾಗಲಿ.
2. ನೀನು ಸಂಕಲ್ಪಿಸಿದ ಹಾಗೆ, ನೀನು ಸಂಕಲ್ಪಿಸಿದ ಹಾಗೆ.
3. ಶಾಶ್ವತವಾಗಿ ನಾನು ನಿನ್ನವನಾಗಿರುತ್ತೇನೆ.

ಸರ್ವಸಾಧಾರಣವಾಗಿ, ಈ ಚಲನೆಗಳನ್ನು ನಿಜವಾದ ರೀತಿಯಲ್ಲಿ ಕೈಕೊಂಡಾಗ ಅದರೊಂದಿಗೆ ಪರಿಪೂರ್ಣ ತಾದಾತ್ಮ್ಯ, ಅಹಂಕಾರದ ಕರಗುವಿಕೆ ಹಾಗೂ ಘನತೆವೆತ್ತ ಸಂತೋಷ ಮೇಲೆದ್ದು ಬರುವಿಕೆ ಇವೆಲ್ಲ ಅನುಸರಿಸಿ ಬರುತ್ತವೆ.

**(CWM, 14/102–03)**

*

ಓ ದೈವೀ ಪ್ರಭು, ನನ್ನ ಸತ್ತೆಯಲ್ಲಿರುವ ಏನೋ ಒಂದು ಹೇಳುತ್ತಿರುವುದು ಹೀಗಿದೆ:

"ನನಗೇನೂ ತಿಳಿಯದು,
ನಾನೇನೂ ಅಲ್ಲ,
ನಾನೇನನ್ನೂ ಕೈಕೊಳ್ಳಲು ಸಾಧ್ಯವಿಲ್ಲ,
ನಾನು ಅಚೇತನದ ಅಂಧಕಾರದಲ್ಲಿದ್ದೇನೆ."

ದೈವೀ ಪ್ರಭು, ಅದು ನೀನೇ ಆಗಿರುವಿ ಎಂದು ಬೇರೆ ಏನೋ ಒಂದು ತಿಳಿದುಕೊಂಡಿದೆ ಮತ್ತು ಹೀಗೆ ಅದು ಪರಮೋಚ್ಚ ಪರಿಪೂರ್ಣತೆ ಹೊಂದಿದೆ.

ಅದರ ಪರಿಣಾಮ ಏನಾಗಲಿದೆ? ಇಂತಹ ಸ್ಥಿತಿ ಎಂದಿಗೆ ಕೊನೆಗೊಳ್ಳುತ್ತದೆ? ಅದು ಜಡತ್ವವಾಗಿದೆಯೆ? ಇಲ್ಲವೆ ನಿಜವಾದ ತಾಳ್ಮೆಯಾಗಿದೆಯೆ? ನನಗೆ ಅದು ತಿಳಿಯದು. ಆದರೆ ಅವಸರ ಮಾಡದೆ, ಆಸೆಗೊಳಗಾಗದೆ ನಾನು ನಿನ್ನ ಪಾದಗಳಡಿಯಲ್ಲಿ ವಿರಮಿಸುವೆ ಹಾಗೂ ಕಾದುಕೊಂಡಿರುವೆ.

**(CWM, 1/147)**

ಮೌನದಿಂದ ವಿನಮ್ರತೆಯಿಂದ ಕೂಡಿದ ಆರಾಧನೆಯೊಂದಿಗೆ ನನ್ನ ಅಭಿನಂದನೆಗಳು.

ನಾನು ನಿನ್ನೆದುರಿಗೆ ನಿನ್ನ ಘನತೆಗೆ ಬಗ್ಗಿ ನಮಸ್ಕಾರ ಮಾಡುತ್ತೇನೆ, ಏಕೆಂದರೆ ಅದು ತನ್ನೆಲ್ಲ ವೈಭವದಿಂದ ನನ್ನ ಮೇಲೆ ಪ್ರಾಬಲ್ಯ ಬೀರುತ್ತದೆ. ...

ಓ, ನಿನ್ನ ಪಾದಗಳಲ್ಲಿ ನಾನು ಕರಗಿ ಹೋಗುವಂತಾಗಲಿ, ನಿನ್ನಲ್ಲಿ ಮುಳುಗಿ ಹೋಗುವಂತಾಗಲಿ.

ಭಗವಂತ, ನಾನು ನಿನ್ನ ಪಾದಗಳಲ್ಲಿ ಇದ್ದುಕೊಳ್ಳುವಂತಾಗಲಿ, ನಿನ್ನ ಹೃದಯದಲ್ಲಿ ನಾನು ಕರಗಿ ಹೋಗುವಂತಾಗಲಿ ಮತ್ತು ನಿನ್ನಲ್ಲಿ ಮಾಯವಾಗು–ವಂತಾಗಲಿ, ನಿನ್ನ ದಿವ್ಯಾನಂದದಲ್ಲಿ ನಾನು ನಶಿಸಿಹೋಗುವಂತಾಗಲಿ, ಇಲ್ಲವೆ ಅದಕ್ಕೂ ಹೆಚ್ಚಾಗಿ, ಏನನ್ನೂ ಹೆಚ್ಚಿಗೆ ಬೇಡದೆ ನಿನ್ನ ಸೇವಕಳಾಗಿರುವಂತಾಗಲಿ. ನಾನು ಇದರ ಹೊರತಾಗಿ ಬೇರಾವುದಕ್ಕೆ ಆಸೆ ಪಡುವುದಿಲ್ಲ. ಕೇವಲ ನಿನ್ನ ಸೇವಕಳಾಗಿರುವುದಷ್ಟನ್ನೇ ನಿನ್ನಿಂದ ಬೇಡುತ್ತಿದ್ದೇನೆ.

**(CWM, 1/211)** **– ಶ್ರೀಮಾತೆ**

*





ಸನಾತನ ದಿವ್ಯಮಾತೆಯ ಹೊರಚಾಚಿಕೊಂಡ ತೋಳುಗಳು ದಿವ್ಯಾನಂದ ನೀಡುವ ಸನ್ನೆ ಮಾಡುತ್ತ ಅವಳ ಅತ್ಯಂತ ಪರಿಶುದ್ಧ ಪ್ರೇಮದ ಆರ್ದ್ರತೆಯನ್ನು ನಿಂತುಹೋಗದ ಹಾಗೆ ಸುರಿಯುತ್ತಿರುತ್ತವೆ.

**(CWM, 1/367)** **– ಶ್ರೀಮಾತೆ**

*

**ಭಯವನ್ನು ತೊಡೆದು ಹಾಕುವುದಕ್ಕೆ ರಹಸ್ಯ ಜ್ಞಾನದ ರೀತಿ:**

ಮೂರನೆಯ ರೀತಿ ದೇವನಲ್ಲಿ ನಂಬಿಕೆ ಹೊಂದಿದವರಿಗಾಗಿದೆ, ಅವನು ಅವರದೇ ದೇವನಾಗಿರಬಹುದು ಮತ್ತು ಅವನಿಗೆ ಅವರು ತಮ್ಮನ್ನು ಸಮರ್ಪಿಸಿಕೊಂಡಿರುತ್ತಾರೆ. ಅವರು ಸಮಗ್ರವಾಗಿ ಅವನಿಗೆ ಸೇರಿದವ–ರಾಗಿರುತ್ತಾರೆ, ಅವರ ಜೀವನಗಳ ಎಲ್ಲ ಘಟನೆಗಳು ದೈವೀ ಸಂಕಲ್ಪದ ಅಭಿವ್ಯಕ್ತಿ ಸ್ವರೂಪದವಾಗಿರುತ್ತವೆ, ಅವರು ಅವುಗಳನ್ನು ಸ್ಥಿರ ಅಧೀನತೆಯಿಂದ ಮಾತ್ರವಲ್ಲ, ಆದರೆ ಕೃತಜ್ಞತೆಯಿಂದ ಸ್ವೀಕರಿಸುತ್ತಾರೆ, ಏಕೆಂದರೆ ಸಂಭವಿಸುವುದು ಏನೇ

ಆಗಿರಲಿ, ಅದು ತಮ್ಮ ಒಳ್ಳೆಯದಕ್ಕಾಗಿರುತ್ತದೆ ಎಂದು ಅವರಿಗೆ ಮನವರಿಕೆಯಾಗಿರುತ್ತದೆ. ಅವರಿಗೆ ತಮ್ಮ ದೇವನಲ್ಲಿ ರಹಸ್ಯ ಜ್ಞಾನದಿಂದ ಉಂಟಾದ ವಿಶ್ವಾಸವಿರುತ್ತದೆ. ಮತ್ತು ಅವನೊಡನೆ ಇರುವ ವೈಯಕ್ತಿಕ ಸಂಬಂಧದಲ್ಲಿ ನಂಬಿಕೆ ಇರುತ್ತದೆ. ಅವರು ತಮ್ಮ ಸಂಕಲ್ಪವನ್ನು ಅವನ ಸಂಕಲ್ಪಕ್ಕೆ ಸಂಪೂರ್ಣವಾಗಿ ಸಮರ್ಪಣ ಮಾಡಿಕೊಂಡಿರುತ್ತಾರೆ ಮತ್ತು ಅವನ ಹೊಯ್ದಾಡದ ಪ್ರೇಮ ಹಾಗೂ ರಕ್ಷಣೆಗಳ ಬಗ್ಗೆ ಭಾವನೆ ತಂದುಕೊಂಡಿರುತ್ತಾರೆ, ಈ ಪ್ರೇಮ ಹಾಗೂ ರಕ್ಷಣೆಗಳು ಜೀವನದಲ್ಲಾಗುವ ಅಪಘಾತಗಳು ಹಾಗೂ ಮೃತ್ಯು ಇವುಗಳಿಂದ ಸ್ವತಂತ್ರವಾಗಿರುತ್ತವೆ. ಅವರಿಗೆ ತಮ್ಮ ಪ್ರೀತ್ಯಾಸ್ಪದನ ಪಾದಗಳಡಿಯಲ್ಲಿ ಸತತ ಇದ್ದುಕೊಂಡಿರುವುದರ ಅನುಭವವಿರುತ್ತದೆ, ಅದನ್ನು ಅವರು ಪರಿಪೂರ್ಣ ಶರಣಾಗತಿಯೊಂದಿಗೆ ಇಲ್ಲವೆ ಅವನ ತೋಳುಗಳಲ್ಲಿ ಪರಿಪೂರ್ಣ ಸುರಕ್ಷಿತತೆ ಇರುವುದರ ಸಂತೋಷ ಪಡೆಯುತ್ತ ತೂಗಾಡಿಕೊಂಡಿರುವುದರೊಂದಿಗೆ ಕೈಕೊಳ್ಳುತ್ತಾರೆ. ಅವರ ಪ್ರಜ್ಞೆಯಲ್ಲಿ ಇನ್ನು ಮುಂದೆ ಭಯ, ತಳಮಳ, ಪೀಡೆ ಇಂತಹವುಗಳಿಗೆ ಸ್ಥಾನವಿರುವುದಿಲ್ಲ, ಅವುಗಳ ಸ್ಥಾನದಲ್ಲಿ ಸ್ಥಿರತೆ ಮತ್ತು ದಿವ್ಯಾನಂದ ಬರುತ್ತವೆ.

**(CWM, 12/84)**

*

**ಮಾರ್ಜಾಲ (ಬೆಕ್ಕು) ಸಾಧಿಕೆಯ ರೀತಿ:**

ನನ್ನ ಹತ್ತಿರ ಒಂದು ಬೆಕ್ಕು ಇತ್ತು – ಆ ದಿನಗಳಲ್ಲಿ ನಾನು ನೆಲದ ಮೇಲೆ ಹಾಸಿಕೊಂಡು ಮಲಗುತ್ತಿದ್ದೆ – ಆ ಬೆಕ್ಕು ಯಾವಾಗಲೂ ಬಂದು ಸೊಳ್ಳೆ ಪರದೆ (mosquito net) ಯೊಳಗೆ ನುಸುಳಿಕೊಂಡು ಬರುತ್ತಿತ್ತು. ನನ್ನ ಬಳಿ ಇದ್ದು ನಿದ್ದೆ ಮಾಡುತ್ತಿತ್ತು. ಸರಿ ಈ ಬೆಕ್ಕು ಕಾಲುಗಳನ್ನು ನೇರವಾಗಿ ಉದ್ದ ಚಾಚಿಕೊಂಡಿರುವಂತೆ ಇರಿಸುತ್ತಿತ್ತು, ಬೆಕ್ಕುಗಳು ಸಾಮಾನ್ಯವಾಗಿ ಮಲಗಿಕೊಳ್ಳುವ ರೀತಿಯಲ್ಲಿ ಅದು ಮಲಗುತ್ತಿರಲಿಲ್ಲ. ಅದು ತನ್ನ ಶಿರವನ್ನು ಇಲ್ಲಿರಿಸುತ್ತಿತ್ತು ಮತ್ತು ಹೀಗೆ (ಸನ್ನೆ ಮಾಡಿ ತೋರಿಸುತ್ತಾರೆ), ನನ್ನ ಕಾಲುಗಳ ಬಳಿ ಉದ್ದ ಚಾಚಿಕೊಂಡು ಬಹಳ ನೇರವಾಗಿ ಬಿದ್ದುಕೊಂಡಿರುತ್ತಿತ್ತು. ಅದು ಹಾಗಿರುವುದನ್ನು ನಾನು ಒಂದು ದಿನ ರಾತ್ರಿ ನೋಡಿದೆ, ಅದು ಬಹಳ ಕುತೂಹಲಕರವಾಗಿತ್ತು. ಇದು ಹೀಗೇಕಿದೆ



ಎಂದು ನನಗೆ ನಾನೇ ಕೇಳಿಕೊಳ್ಳುತ್ತಿದ್ದೆ. ಮತ್ತು ಒಂದು ದಿನ ರಾತ್ರಿ ರಶಿಯಾ ದೇಶದ ಜನರೊಂದಿಗಿರುವ ಚಿಕ್ಕ ಗಾತ್ರದ ಮಹಿಳೆಯೊಬ್ಬಳನ್ನು ನೋಡಿದೆ. ಆಕೆ ತುಪ್ಪಳಗಳುಳ್ಳ ಟೋಪಿ (fur bonnet) ಧರಿಸಿದ್ದಳು, ಅವಳೊಂದಿಗೆ ಅವಳ ಮೂರು ಮಕ್ಕಳಿದ್ದವು. ಈ ಮಹಿಳೆ ತನ್ನ ಮಕ್ಕಳ ಬಗ್ಗೆ ಪ್ರೇಮಾತಿಶಯ ಹೊಂದಿದ್ದಳು ಹಾಗೂ ಅವರಿಗಾಗಿ ಆಶ್ರಯ ಸ್ಥಾನವನ್ನು ಹುಡುಕುತ್ತಿದ್ದಳು. ನನಗೆ ಆ ಕತೆ ಗೊತ್ತಿಲ್ಲ, ಆದರೆ ಅವಳ ಹತ್ತಿರ ಮೂರು ಮಕ್ಕಳಿರುವುದನ್ನು ನೋಡಿದೆ. ಅವು ಬಹಳ ಚಿಕ್ಕವಾಗಿದ್ದವು, ಒಂದು ಹೀಗೆ, ಒಂದು ಹಾಗೆ, ಇನ್ನೊಂದು ಬೇರೆ ರೀತಿಯಲ್ಲಿ (ಶ್ರೀಮಾತೆಯವರು ಆ ಮಕ್ಕಳ ಎತ್ತರವನ್ನು ಸೂಚಿಸುತ್ತಾರೆ) ಇದ್ದವು. ಆಕೆ ಅವರನ್ನು ಎಳೆದುಕೊಂಡು ಹೋಗುತ್ತಿದ್ದಳು ಮತ್ತು ಅವರನ್ನು ಸುರಕ್ಷಿತವಾಗಿ ಇರಿಸುವುದಕ್ಕಾಗಿ ಮೂಲೆಯೊಂದನ್ನು ಅರಸುತ್ತಿದ್ದಳು. ಅವಳಿಗೆ ಏನೋ ಸಂಭವಿಸಿರಬೇಕು ಮತ್ತು ಅವಳು ಒಮ್ಮೆಗೆ ಮರಣ ಹೊಂದಿರಬೇಕು. ಮರಣ ಕಾಲದಲ್ಲಿ ಅವಳು ಒಂದು ಬಗೆಯ ಪಶುಸದೃಶ ಮಾತೃ ಹೃದಯದ ಹುಟ್ಟುಗುಣವನ್ನಿಟ್ಟುಕೊಂಡಿರಬೇಕು, ಆದರೆ ಅವಳು ಭಯ, ತಳಮಳ ಹಾಗೂ ಚಿಂತೆಗಳಿಂದ ತುಂಬಿಕೊಂಡಿದ್ದಳು. – ಮತ್ತು ಈ ಏನೋ ಒಂದು ಅಲ್ಲಿಂದ ಬಂದಿರಬಹುದು, ಒಂದಿಲ್ಲೊಂದು ರೀತಿಯಲ್ಲಿ ಮರುಜನ್ಮ ಪಡೆದಿರಬಹುದು. ಅದು ವ್ಯಕ್ತಿಯಾಗಿರಲಿಲ್ಲ, ಅವಳಿಗೆ ಸೇರಿದ ಒಂದು ಚಲನೆಯಾಗಿತ್ತು. ಮತ್ತು ಅದು ಆ ಬೆಕ್ಕಿನಲ್ಲಿ ಬಂದಿದ್ದಾಗಿರಬಹುದು. ಒಂದಿಲ್ಲೊಂದು ಕಾರಣಕ್ಕಾಗಿ ಅದು ಅಲ್ಲಿದ್ದಿರಬಹುದು, ಅದು ಹೇಗಾಯಿತು ಎಂಬುದರ ಬಗ್ಗೆ ನನಗೆ ತಿಳಿದುಬಂದಿಲ್ಲ, ನನಗೆ ಅದರ ಬಗ್ಗೆ ಏನೂ ತಿಳಿದಿಲ್ಲ. ಆದರೆ ಈ ಬೆಕ್ಕು ತನ್ನ ರೀತಿಗಳಲ್ಲಿ ಸಂಪೂರ್ಣವಾಗಿ ಮನುಷ್ಯರ ಹಾಗೆ ವರ್ತಿಸುತ್ತಿತ್ತು. ನಂತರ ಕೆಲವೇ ದಿನಗಳು ಕಳೆದ ನಂತರ ಅದಕ್ಕೆ ಮೂರು ಮರಿಗಳಾದವು. ಆಗ ಅದು ನಡೆದುಕೊಂಡ ರೀತಿ ಅಸಾಧಾರಣವಾಗಿತ್ತು. ಅದು ಆ ಮರಿಗಳನ್ನು ಬಿಟ್ಟು ಹೋಗುವುದನ್ನು ಎಳ್ಳಷ್ಟೂ ಬಯಸುತ್ತಿರಲಿಲ್ಲ, ಅದು ಆಹಾರ ಸೇವಿಸಲಿಲ್ಲ, ದಿನ ನಿತ್ಯದ ಕರ್ಮಗಳನ್ನು ಪೂರೈಸುವುದಕ್ಕಾಗಿಯಾಗಲಿ ಎಲ್ಲಿಗೂ ಹೋಗಲಿಲ್ಲ. ಒಂದು ದಿನ ಅದಕ್ಕೊಂದು ವಿಚಾರ ಹೊಳೆಯಿತು. – ಯಾರೂ ಅದಕ್ಕೆ ಏನನ್ನೂ ಹೇಳಿರಲಿಲ್ಲ – ಅದು ಒಂದು ಮರಿಯನ್ನು ಬಾಯಲ್ಲಿ ಹಿಡಿದುಕೊಂಡು ಬಂದು ಅದನ್ನು ನನ್ನ ಪಾದಗಳ ಬಳಿ ಇಟ್ಟಿತು. ನಾನು ಚಲಿಸಲಿಲ್ಲ. ಅದು ಮರಳಿ ಹೋಗಿ ಇನ್ನೊಂದು ಮರಿಯನ್ನು

ತಂದು ಅಲ್ಲಿಟ್ಟಿತು, ಮೂರನೆಯದನ್ನೂ ತೆಗೆದುಕೊಂಡು ಬಂದು ಅಲ್ಲಿಟ್ಟಿತು. ಮೂರೂ ಮರಿಗಳು ಅಲ್ಲಿದ್ದ ನಂತರ ಅದು ನನ್ನತ್ತ ನೋಡಿತು, ಮ್ಯೌಂ ಎಂಬ ಸದ್ದು ಮಾಡಿ ಹೊರಟು ಹೋಯಿತು. ಮರಿಗಳನ್ನು ಹಾಕಿದ ನಂತರ ಅದು ಹೀಗೆ ಹೊರಟು ಹೋದದ್ದು ಮೊದಲ ಸಲವಾಗಿತ್ತು. ಅದು ತೋಟದತ್ತ ಹೋಗಿ ತನ್ನ ಆವಶ್ಯಕತೆಗಳನ್ನು ಪೂರೈಸಿ ಒಂದಿಷ್ಟನ್ನೇನನ್ನೋ ತಿಂದು ಬಂದಿತು, ಏಕೆಂದರೆ ಅದು ಶಾಂತಿಯಿಂದಿತ್ತು, ಅದರ ಮರಿಗಳು ನನ್ನ ಕಾಲುಗಳ ಬಳಿ ಇದ್ದವು. ಅದಕ್ಕೆ ಆ ಮರಿಗಳಿದ್ದಾಗ ಮಹಿಳೆಯೊಬ್ಬಳು ಮಕ್ಕಳನ್ನು ಬೆನ್ನ ಮೇಲೆ ಇರಿಸಿಕೊಂಡು ಹೋಗುವ ಹಾಗೆ ಆ ಬೆಕ್ಕು ಮರಿಗಳನ್ನು ಒಯ್ಯಲು ಬಯಸುತ್ತಿತ್ತು. ಅದು ನನ್ನ ಬಳಿ ಮಲಗಿಕೊಂಡಿದ್ದಾಗ, ತನ್ನ ಬೆನ್ನ ಮೇಲೆ ಮಲಗಿಕೊಳ್ಳುತ್ತಿತ್ತು. ಅದು ಬೆಕ್ಕಿನ ಹಾಗಿರಲಿಲ್ಲ.

**(CWM, 7/97–98)** **– ಶ್ರೀಮಾತೆ**

*

ಅದು ಪ್ರಾರಂಭವಾದದ್ದು ಹೀಗೆ. ಒಂದು ಬೆಕ್ಕು ಅವರ (ಶ್ರೀ ಅರವಿಂದರ) ಮನೆಯಲ್ಲಿ ಪಟ್ಟುಹಿಡಿದು ವಾಸಿಸಲು ಪ್ರಯತ್ನಿಸುತ್ತಿತ್ತು. ಆ ಮನೆಯಲ್ಲಿ ಅವರ ಹೊರತಾಗಿ ಇದ್ದ ಬೇರೆಯವರು ಅದಕ್ಕೆ ಅಲ್ಲಿ ಸ್ಥಾನ ಮಾಡಿಕೊಡುವುದನ್ನು ತೊಂದರೆ ತೆಗೆದುಕೊಂಡು ತಡೆಯಲು ಪ್ರಯತ್ನಿಸಿದರು. ಅದು ತನ್ನ ದೃಢ ಸಂಕಲ್ಪದಿಂದ ಜಯ ಗಳಿಸಿತು.

ಶ್ರೀ ಅರವಿಂದರು ಬೆಕ್ಕಿನ ಪ್ರಜ್ಞೆಯ ಮೇಲೆಯೂ ಕೂಡ ಕಾರ್ಯ ಕೈಕೊಳ್ಳಲು ಯೋಚಿಸಿದ್ದರು. ಮತ್ತು ಈ ಮಾರ್ಜಾಲ ಸಾಧಿಕೆ ತನಗಾಗಿ ಹಾಗೂ ತನ್ನ ಸಂತತಿಗಾಗಿ ಒಂದು ನಿವಾಸ ಕಂಡುಕೊಂಡಿತು.

ಬೆಕ್ಕುಗಳ ವಲಸೆ ಪ್ರದೇಶ(colony) ಕುರಿತು ಬರೆಯುವುದಕ್ಕಾಗಿ ಒಂದು ದೀರ್ಘ ಪ್ರಕರಣ ಬೇಕಾಗುವುದು, ಅದನ್ನು ಕೈಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಒಂದು ಸಂದರ್ಭಕ್ಕೆ ಮಾತ್ರ ನನ್ನ ನಿರೂಪಣೆಯನ್ನು ಸೀಮಿತಗೊಳಿಸುತ್ತೇನೆ. ಶ್ರೇಷ್ಠ ಕವಿಗಳಾಗಿದ್ದ ಶ್ರೀ ಅರವಿಂದರು ಬುಸಿ(Bushy) ಹೆಸರಿನ ಬೆಕ್ಕನ್ನು 'ಸೋಪಾನ ಪಂಕ್ತಿಯ ಮೇಲೆ ನಿರಾಸೆ' (Despair on the Staircase) ಎಂಬ ಕವಿತೆಯಲ್ಲಿ ಅಮರವಾದದ್ದನ್ನಾಗಿ ಮಾಡಿದ್ದಾರೆ.



ಬುಸಿ ಶ್ರೀಮಾತೆಯವರ ಹಾಗೂ ಶ್ರೀ ಅರವಿಂದರ ಶ್ರೇಷ್ಠ ಭಕ್ತಳಾಗಿತ್ತು, ಅದು ನಂಬಿಕಸ್ತ ನಾಯಿಯ ಹಾಗೆ ಶ್ರೀಮಾತೆಯವರನ್ನು ಅನುಸರಿಸಿ ನಡೆದುಕೊಂಡು ಹೋಗುವುದನ್ನು ತನ್ನ ಜೀವನದ ನಿಯಮವನ್ನಾಗಿ ಮಾಡಿಕೊಂಡಿತ್ತು. ಸೂಪ (soup) ಪ್ರಸಾದ ವಿತರಣೆಗಾಗಿ ಇಲ್ಲವೆ ಸಾಮೂಹಿಕ ಧ್ಯಾನಕ್ಕಾಗಿ ಅವರು ಅಟ್ಟದ ಮೇಲಿಂದ ಕೆಳಗಿಳಿದು ಬಂದಾಗ ಬುಸಿಯು ಅತ್ಯಂತ ಶ್ರೇಷ್ಠ ಮಹತ್ವಾಕಾಂಕ್ಷೆ ಇಲ್ಲವೆ ಅಭೀಪ್ಸೆಯಿಂದ ತನ್ನ ಮರಿಗಳನ್ನು ಶ್ರೀಮಾತೆಯವರ ಕಾಲುಗಳ ಬಳಿ, ಸಾಧ್ಯವಾದರೆ ಶ್ರೀ ಅರವಿಂದರ ಕಾಲುಗಳ ಬಳಿ, ತನ್ನ ಅರ್ಪಣೆ ಎಂದು ತೋರಿಸುವ ರೀತಿಯಲ್ಲಿ, ಇರಿಸುವುದಾಗಿತ್ತು.

ಈ ಕಾರಣಕ್ಕಾಗಿ ಅದು ತನ್ನ ಮರಿಗಳನ್ನು, ಅಟ್ಟಕ್ಕೆ ಹೋಗುವ ದಾರಿಯಲ್ಲಿ ಅರ್ಧ ದೂರದಲ್ಲಿದ್ದ ಕಪಾಟಿನ ಕೆಳಗೆ ಇರಿಸುತ್ತಿತ್ತು. ಅಟ್ಟದ ಮೇಲಿನ ಕೋಣೆಯಿಂದ ಶ್ರೀಮಾತೆಯವರು ಕೆಳಗಿಳಿದು ಬರುತ್ತಿರುವಾಗ ಇಲ್ಲಿಂದ ತಕ್ಷಣ ಅದು ತನ್ನ ಮರಿಗಳನ್ನು ಒಯ್ದು ಅವರ ಕಾಲುಗಳ ಬಳಿ ಇರಿಸುತ್ತಿತ್ತು. ಅದು ನಿಜವಾಗಿ ಮನ ಮಿಡಿಯುವ ದೃಶ್ಯವಾಗಿತ್ತು. ಬೆಕ್ಕೊಂದು ಕೂಡ ತನ್ನ ಅರ್ಪಣೆಯನ್ನು ಶ್ರೀಮಾತೆಯವರಿಗೆ ತನಗೆ ಪ್ರೀತ್ಯಾಸ್ಪದವಾದ ಮರಿಗಳ ಮೂಲಕ ಮಾಡಿಕೊಳ್ಳುತ್ತಿದ್ದುದು ಅದ್ಭುತವಾಗಿತ್ತು.

**(A few reminiscences by Pujalal, p. 81.)**

*

**ನಿಮ್ಮ ದುಃಖವನ್ನು ಅರ್ಪಣೆ ಮಾಡಿರಿ**

ಪರಿಸ್ಥಿತಿಗಳು ಸಂದರ್ಭವೊಂದನ್ನು ಒದಗಿಸಬಲ್ಲವು, ಆದರೆ ನಿಶ್ಚಿತವಾಗಿ ಕಾರಣ ರೂಪದವಾಗಿರುವುದಿಲ್ಲ. ಕಾರಣ ದೈವೀ ಸಂಕಲ್ಪದಲ್ಲಿರುತ್ತದೆ ಮತ್ತು ಅದನ್ನು ಯಾವುದೂ ಬದಲು ಮಾಡಲು ಸಾಧ್ಯವಿಲ್ಲ.

ಹಾಗಾಗಿ ದುಃಖಪಡಬೇಡಿರಿ. ನಿಮ್ಮ ದುಃಖವನ್ನು ಭಗವಂತನ ಪಾದಗಳ ಬಳಿ ಅರ್ಪಿಸಿರಿ. ಅವನು ನಿಮಗೆ ಶಾಂತಿ ಹಾಗೂ ಮುಕ್ತಿಗಳನ್ನು ನೀಡುತ್ತಾನೆ.

**(CWM, 15/122)** **– ಶ್ರೀಮಾತೆ**

*



### ಸೋಪಾನ ಪಂಕ್ತಿಯ ಮೇಲೆ ನಿರಾಶೆ

ಮೌನದಲಿ ಆಕೆ ನಿಂತಿಹಳು ಏಕಾಂಗಿಯಾಗಿ
ತುತ್ತತುದಿಯ ಸೋಪಾನದ ಮೇಲೆ
ಅತಿ ಗಂಭೀರ ನಿರಾಶೆಯ ಪ್ರತೀಕವಾಗಿ
ದುಃಖಭರಿತ ಶಂಕೆಯ ಘನತೆಯಿಂದೊಡಗೂಡಿ
ವೈಭವಪೂರ್ಣ ಕಣ್ಣುಗಳ ಭವ್ಯತೆಯಲಿ ಎಚ್ಚರಗೊಳ್ಳುವಳವಳು.

ಅವಳ ಚೆಲುವಿನ ಮೂಕ ಪ್ರಮುಖ ನಿಲುವಿನಲಿ
ಅವಳ ರಹಸ್ಯಮಯ ಮನದ ದುಃಖಾಂತವನು ಕಾಣುವೆನು.

ಹಾಗಿದ್ದರೂ ಅವಳಿಗಿದೆ ರಾಜಠೀವಿ, ಆಡಂಬರ ಹಾಗೂ ಬೆಡಗು
ಗಾಢ ಚಿಂತನೆಯ ಮುಖವಾಡವೇ ಅವಳ ನಿಶ್ಚಲ ಮುಖ.


ಜಯಿಸಲಾಗದ ನಿಶಾನೆಯಂತೆ ಮೇಲೆದ್ದಿಹುದು ಅವಳ ಪುಚ್ಛ
ಅದನ್ನಲ್ಲಾಡಿಸುವುದು ಸಲ್ಲದು ಅದರ ಪ್ರತಿಷ್ಠೆಗೆ.

ಅದ್ಭುತ ಮಾನವನ ಹಾಗಿರುವ ಪಶು ಅದಾಗಿಹುದು,
ಕಾಲುಗಳಿಗೆ ತುಪ್ಪಳದ ಉಡುಪಿರುವ ಸೋಜಿಗದ ಲಾವಣ್ಯವಿರುವ ಬ್ರಹ್ಮ,
ಅದು ಭೂತವೋ, ಮಹಿಳೆಯೋ ಮಾರ್ಜಾಲವೋ,
ಎಂಬ ಸಮಸ್ಯೆಯನು ಕುರಿತು ಅಚ್ಚರಿ ಪಡುತಿರುವೆ ನಾನು.

**(CWSA, 15/122)** **– ಶ್ರೀ ಅರವಿಂದರು**

*





**ಶ್ರೀ ಅರವಿಂದರ ಪಾದಗಳ ಇಣುಕು ನೋಟ:**

ಶ್ರೀ ಅರವಿಂದರು ತಮ್ಮ ದೇಹದ ಮೇಲ್ಭಾಗವನ್ನು ವಸ್ತ್ರಗಳಿಂದ ಮುಚ್ಚಿಕೊಳ್ಳುತ್ತಿರಲಿಲ್ಲ ಎಂದು ಹೇಳಿದ್ದೇನೆ. ಹೀಗೆ ಇನ್ನೂ ಹಲವಾರು ರೂಢಿಗಳಲ್ಲಿ ಅವರು ಬಹಳ ರೀತಿಯಲ್ಲಿ ಭಾರತೀಯರಾಗಿದ್ದರು. ಅವರು ಇಂಗ್ಲಿಷ್ ಜನರ ರೀತಿಗಳನ್ನು ಅನುಸರಿಸುತ್ತ ಬೆಳೆದು ಬಂದಿದ್ದರು, ಆ ರೀತಿಗಳನ್ನು ಅವರು ಉಳಿಸಿಕೊಳ್ಳಲಿಲ್ಲ. ಉದಾಹರಣೆಗೆ ಅವರು ವಾಸಿಸುತ್ತಿದ್ದ ಕೋಣೆಯಲ್ಲಿ ಅವರು ಚಪ್ಪಲಿ ಧರಿಸುತ್ತಿರಲಿಲ್ಲ. ಅವರು ಯಾವಾಗಲೂ ಬರಿಗಾಲಿನಿಂದ ಅಡ್ಡಾಡುತ್ತಿದ್ದರು. ಯಾರೋ ಒಬ್ಬರು ಅವರಿಗೆ ಒಂದು ಜೊತೆ ಚಪ್ಪಲಿ ನೀಡಿದಾಗ ಅವರು "ನಾನು ಚಪ್ಪಲಿ ಉಪಯೋಗಿಸುವುದಿಲ್ಲ, ಅವುಗಳನ್ನು ನೋಲಿನಿಗೆ ಕೊಟ್ಟುಬಿಡಿರಿ, ಅವನಿಗೆ ಅವು ಇಷ್ಟವಾಗುತ್ತವೆ" ಎಂದು ಹೇಳಿದರು. ಚಳಿಗಾಲದ ಉಗ್ರ ಹವಾಮಾನವಿದ್ದಾಗ ಅವರು ಕೇವಲ ಒಂದು ಚಾದರವನ್ನು ಉಪಯೋಗಿಸುತ್ತಿದ್ದರು. ಅವರು ಮಲಗಿದಾಗ ಯಾವಾಗಲೂ ತಮ್ಮ ಪಾದಗಳನ್ನು ಹೊದ್ದುಕೊಂಡದ್ದರಿಂದ ಹೊರಗೆ ಚಾಚಿ ಇರಿಸುತ್ತಿದ್ದುದು ನನ್ನ ಕುತೂಹಲ ಕೆರಳಿಸುತ್ತಿತ್ತು. ಅದು ನನಗೆ ವಿಲಕ್ಷಣವಾದದ್ದೆನಿಸಿತು, ಏಕೆಂದರೆ ನಮ್ಮ ಪಾದಗಳು ದೇಹದ ಬೇರೆ ಯಾವುದೇ ಅಂಗಕ್ಕಿಂತ ಹೆಚ್ಚಿನ ರೀತಿಯಲ್ಲಿ ಶೀತದ ಅನುಭವ ತಂದುಕೊಳ್ಳುತ್ತವೆ. ಅದು ಎಲ್ಲ ಕ್ಷಣಗಳಲ್ಲಿ, ರಾತ್ರಿಕಾಲದಲ್ಲೂ ಕೂಡ, ದೈವೀ ಪ್ರಭುವಿನ ಪಾದಗಳು ಆಶ್ರಯಧಾಮ ಇರುವ ಹಾಗೆ ಆವಶ್ಯಕತೆ ಇದ್ದವರಿಗೆ, ಭಕ್ತರಿಗೆ ಲಭ್ಯವಾಗಿರಬೇಕು ಎಂದಿತ್ತೆ?

ಬಹಳಷ್ಟು ಸತ್ತೆಗಳು ತಮ್ಮ ಪ್ರಣಾಮವನ್ನು ಅರ್ಪಿಸಲು ತಮ್ಮ ಸೂಕ್ಷ್ಮ ರೂಪದಲ್ಲಿ ಬಂದಿದ್ದವು ಎಂದು ಭಾವಿಸುವುದು ಕಲ್ಪನಾತಿರೇಕದ್ದೆನಿಸುವುದಿಲ್ಲ. ನನ್ನ ಊಹನೆ ಒಟ್ಟಿನಲ್ಲಿ ಕಲ್ಪಿತ–ಕತೆಯಲ್ಲ, ಏಕೆಂದರೆ ಶ್ರೀಮಾತೆಯವರ ಹೇಳಿಕೆ ಪ್ರಕಾರ ಶ್ರೀ ಅರವಿಂದರು ಸೂಕ್ಷ್ಮ ಭೌತಿಕದ ಸ್ತರದಲ್ಲಿ ನಿವಾಸವೊಂದನ್ನು ನಿರ್ಮಾಣ ಮಾಡಿದ್ದಾರೆ, ನಮ್ಮಲ್ಲಿ ಹಲವಾರು ಜನರು ನಮ್ಮ ಸೂಕ್ಷ್ಮ ಶರೀರಗಳಲ್ಲಿ ಅವರನ್ನು ಭೇಟಿ ಮಾಡಲು ಹೋಗುತ್ತೇವೆ. ಅವರು ಇನ್ನೂ ಹೆಚ್ಚಿನದನ್ನು ಹೇಳಿದ್ದಾರೆ: ನಮ್ಮ ನಿದ್ರಾ ಸಮಯದಲ್ಲಿ ನಾವು ಅವರನ್ನು ಭೇಟಿ ಮಾಡುತ್ತೇವೆ ಇಲ್ಲವೆ ಅವರು ನಮ್ಮನ್ನು ಭೇಟಿ ಮಾಡುತ್ತಾರೆ. ಬೆಳಗಿನ ಸಮಯದಲ್ಲಿ ಅವರು ಮೇಲಿಂದ ಮೇಲೆ ಕೇಳಿದ್ದಾರೆ:

"ನಿಮಗೆ ಅದರ ಬಗ್ಗೆ ಏನಾದರೂ ತಿಳಿದಿದೆಯೆ?" ಸರಿ, ಇದೆಲ್ಲವೂ ನಿಜವಾದದ್ದರಿಂದ ಸತ್ತೆಗಳು ತಮ್ಮ ಸೂಕ್ಷ್ಮ ರೂಪದಲ್ಲಿ ಶ್ರೀ ಅರವಿಂದರಿಗೆ ಪ್ರಣಾಮ ಮಾಡಲು ಬರಬಲ್ಲವು. "ಆದರೆ ಬರಿಗಾಲುಗಳೇಕೆ?" ಎಂದು ಮನುಷ್ಯ ಕೇಳಬಹುದು. ಅದಕ್ಕೆ ನನ್ನ ಉತ್ತರ: "ಅದು ಭಾರತೀಯ ರೂಢಿ."

**(Twelve years with Sri Aurobindo, Nirodbaran, p. 62)**

*

**ರೋಗ ನಿವಾರಣೆ ಮಾಡುವ ಶ್ರೀಮಾತೆಯವರ ಪಾದಗಳು:**

ಸಂದರ್ಭ ಎಪ್ರಿಲ್ 24, 1956 ರದು. 1955 ರಲ್ಲಿ ಶ್ರೀಮಾತೆಯವರು ಅತಿಮಾನಸದ ಪ್ರಕಟಣೆ ಕುರಿತು ಮಾತನಾಡಿದ್ದರು, ಅದನ್ನು ಅವರು ನಿರೀಕ್ಷಿಸುತ್ತಿದ್ದರು, ಅದು ಎಪ್ರಿಲ್ 24, 1956 ರಲ್ಲಿ ಆಗಲಿದೆ ಎಂದಿದ್ದರು. ಆದರೆ ಅದು ಫೆಬ್ರುವರಿ 29, 1956 ರಂದು ಪ್ರಕಟವಾಯಿತು. ಆ ವರ್ಷದ ಎಪ್ರಿಲ್ 24 ರಂದು ಅದನ್ನು ಮೊದಲಿಗೆ ಘೋಷಿಸಿ ಹೇಳಲಾಯಿತು. ನಿಶಿಕಾಂತ ತನ್ನನ್ನು ಆ ದಿನಾಂಕದ ವರೆಗೆ ಜೀವಂತವಾಗಿಡುವಂತೆ ಶ್ರೀಮಾತೆಯವರಿಗೆ ಬರೆದು ಕೇಳಿಕೊಂಡಿದ್ದ. ಶ್ರೀಮಾತೆಯವರು ಅವನಿಗೆ ವಚನ ನೀಡಿದ್ದರು. ಈಗ ಅದಕ್ಕೆ ಕೇವಲ ಮೂರು ದಿನಗಳು ಉಳಿದುಕೊಂಡಿದ್ದವು. ಮತ್ತು ಅವನು ಮರಣ ಶಯ್ಯೆಯಲ್ಲಿದ್ದ. ಅವನು ದರ್ಶನದ ದಿನದವರೆಗೆ ಹೇಗೋ ಬದುಕಿ ಉಳಿದುಕೊಂಡ. ದರ್ಶನ ದಿನ ಮುಕ್ತಾಯಗೊಂಡ ಕೂಡಲೆ ನಾವು ಅವನನ್ನು ಶ್ರೀಮಾತೆಯವರ ದರ್ಶನಕ್ಕಾಗಿ ಕೈಮಂಚ(Stretcher)ದ ಮೇಲೆ ಅವನನ್ನು



ಮಲಗಿಸಿ ಕರೆತಂದೆವು. ಆ ಕೈಮಂಚವನ್ನು ಅಟ್ಟಕ್ಕೆ ಹೋಗುವ ಪಾವಟಣೆಗೆಗಳ ಅಡಿಯಲ್ಲಿ ಇರಿಸಲಾಯಿತು. ಶ್ರೀಮಾತೆಯವರು ಪ್ರಣಬ ಹಾಗೂ ಇತರರೊಂದಿಗೆ ಕೆಳಗಿಳಿದು ಬಂದರು. ನಾವು ಕೈಮಂಚವನ್ನು ಎತ್ತಿಹಿಡಿದೆವು. ನಿಶಿಕಾಂತ ತನ್ನ ಅಶಕ್ತ ಕೈಗಳನ್ನು ಮುಂದೆ ಚಾಚಿದ. ಶ್ರೀಮಾತೆಯವರು ಕೂಡಲೆ ಅವುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ತಮ್ಮೆಡೆಗೆ ಎಳೆದುಕೊಂಡರು ಮತ್ತು ಅರಳಿದ, ಯಾಚಿಸುವ ಕಣ್ಣುಗಳಲ್ಲಿ ಮೌನದಿಂದ ಮುಗುಳ್ನಗೆ ಬೀರಿದರು. ನಂತರ ತಮ್ಮ ಕೋಮಲ ಬೆರಳುಗಳೊಂದಿಗೆ ಅವನ ತಳಮಳಗೊಂಡ ಹುಬ್ಬಿನ ಮೇಲೆ ಮೃದುವಾಗಿ ತೀಡಿದರು, ಅದು ಅಲ್ಲಿದ್ದ ಎಲ್ಲ ಕಾರ್ಮಿಕ ಬರಹಗಳನ್ನು ಒರೆಸಿ ತೆಗೆದುಹಾಕಿದಂತಿತ್ತು. ನಿಶಿಕಾಂತ ಒಮ್ಮೆಗೆ ತನ್ನ ಎದೆಯತ್ತ ಬೊಟ್ಟುಮಾಡಿ ತೋರಿಸಿ ತಡವರಿಸುತ್ತ ಪಿಸುಗುಟ್ಟಿದ "ಶ್ರೀಮಾತೆಯವರೆ ನಿಮ್ಮ ಪಾದವನ್ನು ಇಲ್ಲಿರಿಸಿರಿ" ಕೈಮಂಚವನ್ನು ಕೆಳಗಿಳಿಸಲಾಯಿತು. ಶ್ರೀಮಾತೆಯವರು ಪ್ರಣಬನ ತೋಳನ್ನು ಆಸರೆಗಾಗಿ ಹಿಡಿದುಕೊಂಡು ತಮ್ಮ ಬಲಪಾದವನ್ನು ಮೃದುವಾಗಿ ಅವನ ಎದೆಯ ಮೇಲಿರಿಸಿದರು. ನಿಶಿಕಾಂತ ಅದನ್ನು ತನ್ನ ನಡುಗುತ್ತಿರುವ ಕೈಗಳಿಂದ ಎದೆಗೊತ್ತಿಕೊಂಡನು. ಶ್ರೀ ಅರವಿಂದರ ಮಾಂತ್ರಿಕ ಸಾಲುಗಳು ಮನಸ್ಸಿನ ಮುಂದೆ ಬಂದವು:

**"ಯಾತನೆ ನೀಡುತ್ತಿರುವ ಜೀವನದ ಮಿಡಿತಗಳನು**
**ಅವಳ ಪಾದಗಳು ವಾಸಿಮಾಡುವವು"**

ಸಾಯಂಕಾಲ ನಾನು ನಿಶಿಕಾಂತನನ್ನು ನೋಡಲು ಹೋದಾಗ ಅವನಲ್ಲಿ ಜ್ವರಪೀಡಿತ ತಳಮಳವಿರಲಿಲ್ಲ. ಮುಖ ಮತ್ತು ದೇಹ ಪ್ರಶಾಂತತೆಯಿಂದ ಉಸಿರಾಡಿಸುತ್ತಿದ್ದವು. "ಅಂತರಂಗದಲ್ಲಿದ್ದ ಆ ನರಕ ಸದೃಶ ಜ್ವಾಲೆ ಕೆಳಮಟ್ಟಕ್ಕಿಳಿದಿದೆ. ಅಹಾ! ದೇಹ ಹಿಮದಷ್ಟು ತಣ್ಣಗಾಗಿದೆ. ಪ್ರತಿಯೊಂದು ಜೀವಕೋಶ ಶಾಂತಿಯಿಂದ ಸಾಂತ್ವನಗೊಂಡಿದೆ."

1956 ರಲ್ಲಿ ಈ ಪವಾಡ ನಮ್ಮ ಕಣ್ಣಮುಂದೆ ನಡೆಯಿತು. ನಿಶಿಕಾಂತ ನಂತರ ಹದಿನೇಳು ವರ್ಷಗಳ ಕಾಲ ಜೀವಿಸಿದ್ದ.

**(Memorable contacts with the Mother, Nirodbaran, p. 120)**

*



## ದೈವೀ ಸ್ಪರ್ಶ

**ಶ್ರೀಮಾತೆಯವರ ಸ್ಪರ್ಶ ತೊಂದರೆಗಳನ್ನು ಸದವಕಾಶಗಳಾಗುವಂತೆ ಹೊರಳಿಸಬಹುದು:**

ನಿಮ್ಮನ್ನು ನೀವು ಕೊಟ್ಟುಕೊಂಡಾಗ, ಯಾವ ಬೇಡಿಕೆ, ಕರಾರು, ಕಾದಿರಿಸಿಕೊಳ್ಳುವಿಕೆ ಇಲ್ಲದ ಹಾಗೆ ಸಂಪೂರ್ಣವಾಗಿ ಕೊಟ್ಟುಕೊಳ್ಳಿರಿ, ಅದರಿಂದಾಗಿ ನಿಮ್ಮಲ್ಲಿ ಇರುವುದೆಲ್ಲವೂ ಶ್ರೀಮಾತೆಯವರಿಗೆ ಸೇರಿದ್ದಾಗುವುದು ಮತ್ತು ಯಾವುದೂ ಅಹಂಕಾರಕ್ಕಾಗಲಿ ಇಲ್ಲವೆ ಇನ್ನಾವುದೋ ಸಾಮರ್ಥ್ಯಕ್ಕಾಗಲಿ ಉಳಿದುಕೊಳ್ಳದಂತಾಗುವುದು.

ನಿಮ್ಮ ನಂಬಿಕೆ, ನಿಷ್ಕಾಪಟ್ಯ ಹಾಗೂ ಸಮರ್ಪಣ ಸಂಪೂರ್ಣವಾಗುತ್ತ ಹೋಗುತ್ತಿದ್ದಂತೆ ದೈವೀ ಕೃಪೆ ಹಾಗೂ ರಕ್ಷಣೆಗಳೂ ಹೆಚ್ಚುತ್ತ ಹೋಗುತ್ತವೆ. ದೈವೀ ಕೃಪೆ ಹಾಗೂ ರಕ್ಷಣೆ ನಿಮ್ಮೊಂದಿಗಿದ್ದಾಗ ನಿಮ್ಮನ್ನು (ಯೋಗ್ಯವಲ್ಲದ) ಯಾವುದು ತಟ್ಟಬಲ್ಲದು, ಮತ್ತು ನಿಮಗೆ ಭಯವನ್ನುಂಟು ಮಾಡುವಂತಹರು ಯಾರಿರುತ್ತಾರೆ? ಅದರ ಅಲ್ಪ ಮಾತ್ರದ್ದೂ ಕೂಡ ನಿಮ್ಮನ್ನು ಎಲ್ಲ ತೊಂದರೆಗಳಿಂದ, ಅಡೆತಡೆಗಳಿಂದ ಹಾಗೂ ಅಪಾಯಗಳಿಂದ ಪಾರು ಮಾಡುವುದು. ನಿಮ್ಮನ್ನು ಸುತ್ತುವರಿದ ಪೂರ್ತಿಯಾದ ದೈವೀ ಸಾನ್ನಿಧ್ಯದಿಂದ ನೀವು (ಆಧ್ಯಾತ್ಮಿಕ) ಮಾರ್ಗದಲ್ಲಿ



ಸುರಕ್ಷಿತವಾಗಿ ಸಾಗಿ ಹೋಗಬಹುದು, ಏಕೆಂದರೆ ಆ ದೈವೀ ಸಾನ್ನಿಧ್ಯ ಶ್ರೀಮಾತೆಯವರದು, ಎಲ್ಲ ಪೀಡೆಗಳನ್ನು ನಿರ್ಲಕ್ಷಿಸುವಂತಹದು, ವಿರೋಧ ಎಷ್ಟೇ ಸಾಮರ್ಥ್ಯಪೂರ್ಣವಾಗಿರಲಿ, ಅದು ಈ ಲೋಕದ್ದೇ ಆಗಿರಲಿ ಇಲ್ಲವೆ ಇತರ ಲೋಕಗಳಿಗೆ ಸೇರಿದ್ದೇ ಆಗಿರಲಿ, ಆ ಸಾನ್ನಿಧ್ಯದ ಮೇಲೆ ಯಾವ ಪರಿಣಾಮವನ್ನೂ ಬೀರಲಾರದು. ಅದರ ಸ್ಪರ್ಶ ತೊಂದರೆಗಳು ಸದವಕಾಶಗಳಾಗುವಂತೆ, ವಿಫಲತೆ ಯಶಸ್ಸಾಗುವಂತೆ, ದೌರ್ಬಲ್ಯ ವಿಫಲವಾಗದ ಬಲವಾಗುವಂತೆ ಮಾರ್ಪಾಡು ಮಾಡಬಲ್ಲದು, ಏಕೆಂದರೆ ಶ್ರೀಮಾತೆಯವರ ಕೃಪೆ ಪರಮೋಚ್ಚ ಅನುಮತಿ ಇದ್ದ ಹಾಗೆ, ಇಂದಾಗಲಿ ಇಲ್ಲವೆ ನಾಳೆಯಾಗಲಿ ಅದರ ಪರಿಣಾಮ ಖಚಿತ, ಶಾಸನ ರೀತಿಯದು ಮತ್ತು ಎದುರಿಸಲಾಗದಂತಹದು.

**(SABCL, 25/10)** – ಶ್ರೀ ಅರವಿಂದರು

**ಆಧ್ಯಾತ್ಮಿಕ ಸಾಧನೆಯಲ್ಲಿ ಭೌತಿಕ ಸಾಧನದ ಉಪಯೋಗ**

ಭೌತಿಕ ಸಾಧನ (ದರ್ಶನ ಮತ್ತು ಪ್ರಣಾಮದ ಸಮಯದಲ್ಲಿ ದೊರಕುವ ಸ್ಪರ್ಶ) ದೈವೀ ಪ್ರೇಮದ ಬಳಿ ಸಾಗುವುದಕ್ಕಾಗಿ, ಪೂಜೆ ಮಾಡುವುದಕ್ಕಾಗಿ ಉಪಯುಕ್ತವಾಗಬಲ್ಲದು ಮತ್ತು ಅದನ್ನು ಉಪಯೋಗ ಮಾಡಲಾಗುತ್ತದೆ. ಮಾನವ ದೌರ್ಬಲ್ಯಗಳಿಗೆ ವಿನಾಯಿತಿ ಎಂದು ಮಾತ್ರ ಅವುಗಳಿಗೆ ಅನುವು ಮಾಡಿಕೊಡಲಾಗಿರುವುದಿಲ್ಲ ಮತ್ತು ಚೈತ್ಯಾತ್ಮಿಕ ಮಾರ್ಗದಲ್ಲಿ ಇಂತಹ ವಿಷಯಗಳಿಗೆ ಸ್ಥಾನವಿಲ್ಲ ಎಂದಲ್ಲ. ತದ್ವಿರುದ್ಧವಾಗಿ ಅವು ಭಗವಂತನ ಬಳಿ ಸಾಗುವುದಕ್ಕಾಗಿ, ಮತ್ತು ದೈವೀ ಪ್ರಕಾಶವನ್ನು ಸ್ವೀಕರಿಸುವುದಕ್ಕಾಗಿ ಹಾಗೂ ಚೈತ್ಯಾತ್ಮಿಕ ಸಂಪರ್ಕ ಭೌತಿಕ ರೂಪ ತಾಳುವಂತೆ ಮಾಡುವುದಕ್ಕಾಗಿ ಒಂದು ಸಾಧನ ರೂಪದ್ದಾಗಿರುತ್ತವೆ. ಮತ್ತು ಆ ಕಾರ್ಯವನ್ನು ಸರಿಯಾದ ಮನೋಭಾವದಿಂದ ಕೈಕೊಂಡಾಗ ಹಾಗೂ ಅವುಗಳನ್ನು ನಿಜವಾದ ಉದ್ದೇಶಕ್ಕೆ ಉಪಯೋಗಿಸಿದಾಗ ಅವುಗಳಿಗೆ ಅವುಗಳದೇ ಸ್ಥಾನವಿರುತ್ತದೆ. ಕೇವಲ ಅವುಗಳ ದುರುಪಯೋಗವಾದಾಗ, ಇಲ್ಲವೆ ಸಮೀಪಿಸುವಿಕೆ ಸರಿಯಾದ ರೀತಿಯಲ್ಲಿ ಇರದೆ ಇದ್ದಾಗ, ಉದಾಸೀನತೆ ಹಾಗೂ ಜಡತ್ವಗಳಿಂದ ಕೂಡಿಕೊಂಡಾಗ ಇಲ್ಲವೆ ಬಂಡಾಯ ಹಾಗೂ ದ್ವೇಷಗಳಿದ್ದಾಗ, ಇಲ್ಲವೆ ಒರಟಾದ ಆಸೆಯಿದ್ದಾಗ, ಅವು ತಮ್ಮ ಸ್ಥಾನದಿಂದ ಹೊರಗಿರುತ್ತವೆ ಮತ್ತು ವಿರುದ್ಧ ಪರಿಣಾಮವನ್ನುಂಟು ಮಾಡಬಲ್ಲವು.

**(SABCL, 23/756)**

ಪ್ರಣಾಮವನ್ನು ಔಪಚಾರಿಕ ದೈನಂದಿನ ಕ್ರಿಯೆಯೆಂದು ಇಲ್ಲವೆ ನಿರ್ಬಂಧಕ್ಕೊಳಗಾದ ಸಮಾರಂಭವೆಂದು ನೋಡಬಾರದು, ಇಲ್ಲವೆ ಮನುಷ್ಯ ಅಲ್ಲಿಗೆ ಬರಲು ಒತ್ತಾಯಕ್ಕೊಳಗಾಗಿದ್ದಾನೆ ಎಂದುಕೊಳ್ಳಬಾರದು. ಪ್ರಣಾಮದ ಉದ್ದೇಶ ಸಾಧಕರು ಔಪಚಾರಿಕವಾದ ಇಲ್ಲವೆ ದೈನಂದಿನ ಮತಾಚರಣೆಯ ರೂಪದಲ್ಲಿ ಶ್ರೀಮಾತೆಯವರಿಗೆ ಗೌರವಾರ್ಪಣೆ ಮಾಡುವುದಿರುವುದಿಲ್ಲ, ಆದರೆ ಶ್ರೀಮಾತೆಯವರ ಆಶೀರ್ವಾದಗಳೊಂದಿಗೆ ಸಾಧಕರು ಸ್ವೀಕರಿಸಬಹುದಾದ ಇಲ್ಲವೆ ಜೀರ್ಣಿಸಿಕೊಳ್ಳಬಹುದಾದ ಆಧ್ಯಾತ್ಮಿಕ ಸಹಾಯ ಇಲ್ಲವೆ ಪ್ರಭಾವವನ್ನು ಸ್ವೀಕರಿಸುವಂತಾಗಲಿ ಎಂದಿರುತ್ತದೆ. ಆ ಉದ್ದೇಶಕ್ಕಾಗಿ ಅಚಂಚಲವಾದ ಹಾಗೂ ಒಟ್ಟುಗೂಡಿದ ವಾತಾವರಣವನ್ನು ಕಾಪಾಡಿಕೊಂಡು ಬರುವುದು ಮಹತ್ವದ್ದಾಗಿರುತ್ತದೆ.

**(SABCL, 32/530)**

ಭೌತಿಕ ಸಂಪರ್ಕದ ಆವಶ್ಯಕತೆ ಇಲ್ಲದೆ ಮನುಷ್ಯನಿಗೆ ಶ್ರೀಮಾತೆಯವರ ಆಂತರಿಕ ಸ್ಪರ್ಶದ ಭಾವನೆ ತಂದುಕೊಳ್ಳುವುದು ಸಾಧ್ಯವಾದಾಗ ಆ ಸ್ಪರ್ಶದ ನಿಜವಾದ ಮೌಲ್ಯ ಕ್ರಿಯಾಶೀಲವಾಗುವುದು, ಹಾಗಿರದೆ ಹೋದರೆ ಅದು ಕೇವಲ ಕೃತ್ರಿಮ ಉತ್ತೇಜನಕ್ಕಾಗಿ ಇಲ್ಲವೆ ತನ್ನದೇ ಲಾಭಕ್ಕಾಗಿ ಅವರಿಂದ ಪ್ರಾಣಿಕದ ಶಕ್ತಿಯನ್ನು ಎಳೆದುಕೊಳ್ಳುವುದಾಗಿರುತ್ತದೆ.

**(CWSA, 32/564)** **– ಶ್ರೀ ಅರವಿಂದರು**

*

**ಪ್ರಶ್ನೆ :** *ದರ್ಶನದ ಸಮಯದಲ್ಲಿ ನನ್ನ ಪಾಳಿ ಬಂದಾಗ ಮಾಂತ್ರಿಕ ಶಕ್ತಿಯಲ್ಲಿ ನನ್ನ ಪ್ರಜ್ಞೆಯನ್ನು ಹಿಡಿದಿಡಲಾಗಿತ್ತು ಮತ್ತು ಅದು ರೋಮಾಂಚನಗೊಂಡಿತು. ಅದು ಬಹಳ ಅದ್ಭುತವಾಗಿತ್ತು ಮತ್ತು ನನ್ನ ಚೈತ್ಯವನ್ನು ಮುಂಭಾಗಕ್ಕೆ ತಂದಿತು. ನನ್ನ ಇಡೀ ದೇಹದಾದ್ಯಂತ ಸಾಗಿ ಹೋಗುವ ಮತ್ತು ಆಧಾರವನ್ನು ಕೆಲಕಾಲ ನಿಶ್ಚಲಗೊಳಿಸುವ ಈ ರೋಮಾಂಚನ ಏನಾಗಿದೆ!*

**ಶ್ರೀ ಅ :** ಸಹಜವಾಗಿ, ಅದು ಮೇಲ್ಗಡೆಯಿಂದ ಬಂದ ಹಾಗೂ ಚೈತ್ಯ ಪ್ರಾಣಿಕದೊಡನೆ ಕೂಡಿಕೊಂಡು ಭಾವನೆಗೆ ತಂದುಕೊಂಡ ಶ್ರೀಮಾತೆಯವರ ಸ್ಪರ್ಶದಿಂದ ಉಂಟಾದ ರೋಮಾಂಚನ.

**(CWSA, 32/468)** **– ಶ್ರೀ ಅರವಿಂದರು**





ಅವರ ಹಸ್ತಗಳ ಸ್ಪರ್ಶ ಆತ್ಯಾಕರ್ಷಕ(magnetic)ವಾಗಿರುತ್ತದೆ, ಮತ್ತು ಅವುಗಳ ಸೂಕ್ಷ್ಮ ಪ್ರಭಾವ ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ಒಳ್ಳೆಯ ಸಂಸ್ಕಾರಕ್ಕೆ ಒಳಪಡಿಸುತ್ತದೆ ಮತ್ತು ಅವರು ತಮ್ಮ ಪಾದಗಳನ್ನು ಒತ್ತಿದಲ್ಲೆಲ್ಲ ಪರವಶವಾಗಿಸುವ ಆನಂದದ ಪ್ರವಾಹಗಳು ಹರಿದು ಹೊರಬರುತ್ತವೆ.

**(CWSA, 32/2)** **– ಶ್ರೀ ಅರವಿಂದರು**

*

**ಆಂತರಿಕ ಹಾಗೂ ಬಾಹ್ಯ ಸಂಪರ್ಕ:**

ಶ್ರೀಮಾತೆಯವರೊಡನೆ ಆಂತರಿಕ ಸಂಪರ್ಕ ಹೆಚ್ಚುತ್ತ ಹೋಗಲಿ, ಬಾಹ್ಯ ಸಂಪರ್ಕಗಳು ಅತಿ ಹೆಚ್ಚಿನ ರೀತಿಯಲ್ಲಿ ಆಗುತ್ತ ಹೋದರೆ ಆ ಸ್ಪರ್ಶ ನಿತ್ಯಗಟ್ಟಲೆ ಕಾರ್ಯಕ್ರಮವಾಗಿ ಶ್ರೇಷ್ಠತೆ ಕಳೆದುಕೊಳ್ಳುತ್ತದೆ.

**(CWSA, 32/456)**

ಆಂತರಿಕ ಸಂಪರ್ಕ ಪಡೆಯಬೇಕೆಂಬ ಅರ್ಥದಲ್ಲಿ ನಾನು ಹೇಳಿದ್ದೆ. ಅದರಲ್ಲಿ ಮನುಷ್ಯ ಅವರೊಡನೆ ಏಕವಾಗಿರುವ ಇಲ್ಲವೆ ಅವರ ಸಾನ್ನಿಧ್ಯದ ಅರಿವು ಹೊಂದಿರುವ ಇಲ್ಲವೆ ಕನಿಷ್ಠ ಪಕ್ಷ ಅವರತ್ತ ಯಾವಾಗಲೂ ಹೊರಳಿಕೊಂಡಿರುವ ಭಾವನೆ ತಂದುಕೊಳ್ಳುತ್ತಾನೆ.

**(CWSA, 32/291)**

ಆಂತರಿಕ ಸತ್ತೆಯಲ್ಲಿ ಭಾವನೆಗೆ ಬರುವ ಶ್ರೀಮಾತೆಯವರ ಪ್ರಭಾವ ಆಂತರಿಕ ಸ್ಪರ್ಶವಾಗಿರುತ್ತದೆ.

**(SABCL, 25/291)**

**ಪ್ರಶ್ನೆ :** *ನಿಮಗೊಂದು ಪತ್ರ ಬರೆಯುವಾಗ ಉಚ್ಚತರ ವಿಷಯಗಳು ಹೆಚ್ಚುತ್ತ ಹೋಗುತ್ತವೆ ಹಾಗೂ ಬಲವತ್ತರವಾಗಿರುತ್ತವೆ, ಅದು ಹೇಗೆ?*

**ಶ್ರೀ ಅ :** ಅದು ಹಾಗಿರುವುದೇಕೆಂದರೆ ಬರೆಯುವ ಕಾರ್ಯದಲ್ಲಿ ತೊಡಗಿ–ಕೊಂಡಾಗ ಇಲ್ಲವೆ ಅದಕ್ಕೂ ಹೆಚ್ಚಾಗಿ ಆ ಕಾರ್ಯದ ಪ್ರಾರಂಭದಲ್ಲಿ ನೀನು ಶ್ರೀಮಾತೆಯವರ ಹಾಗೂ ದೈವೀ ಶಕ್ತಿಯ ಸಂಪರ್ಕದಲ್ಲಿ ಪ್ರವೇಶಿಸುತ್ತೀ ಎಂದು ನನಗನಿಸುತ್ತದೆ.

**(SABCL, 25/292–93)**

ಶ್ರೀಮಾತೆಯವರು ಎರಡೂ ರೀತಿಗಳಲ್ಲಿ ಕೊಡುತ್ತಾರೆ. ಕಣ್ಣುಗಳ ಮೂಲಕ ಚೈತ್ಯಾತ್ಮಿಕ ರೂಪದಲ್ಲಿ ಮತ್ತು ಕೈ ಮೂಲಕ ಭೌತಿಕ ರೂಪದಲ್ಲಿ ಆ ಕೊಡುಗೆ ಇರುತ್ತದೆ.

**(CWSA, 32/530)**

ಎಲ್ಲ ಬಾಹ್ಯ ಪರಿಸ್ಥಿತಿಗಳಿಂದ ಸ್ವತಂತ್ರವಾಗಿ ಆಂತರಿಕ ಮನೋಭಾವವನ್ನು ಹೊಂದಿರುವುದು ಮತ್ತು ಶ್ರೀಮಾತೆಯವರೊಂದಿಗೆ ಆಂತರಿಕ ಸಂಪರ್ಕವನ್ನು ಸ್ಥಾಪಿಸುವುದು ಬಹಳ ಮಹತ್ವದ್ದಾದ ವಿಷಯ. ಅವಶ್ಯವಾದದ್ದನ್ನೆಲ್ಲ ಅದೊಂದೇ ತಂದುಕೊಡುತ್ತದೆ. ಯೋಗದಲ್ಲಿ ಅತ್ಯಂತ ಆಳವಾಗಿ ತೊಡಗಿಕೊಂಡವರು ಶ್ರೀಮಾತೆಯವರನ್ನು ಭೌತಿಕವಾಗಿ ಹೆಚ್ಚಿನ ರೀತಿಯಲ್ಲಿ ನೋಡುವವ–ರಾಗಿರುವುದಿಲ್ಲ. ಶ್ರೀಮಾತೆಯವರ ಹತ್ತಿರ ಸತತ ಇರುವವರಿದ್ದಾರೆ, ಅವರೊಡನೆ



ಏಕವಾದವರಿದ್ದಾರೆ, ಅವರು ಪ್ರಣಾಮ ಮತ್ತು ಸಾಯಂಕಾಲದ ಧ್ಯಾನ ಇವುಗಳ ಹೊರತಾಗಿ ಕೇವಲ ವರ್ಷಕ್ಕೊಮ್ಮೆ ಅವರ ಬಳಿ ಬರುತ್ತಾರೆ.

**(CWSA, 32/496)**

ಶ್ರೀಮಾತೆಯವರ ಕೃಪೆ ಒಂದು ವಿಷಯ, ಬದಲಾವಣೆಗಾಗಿ ಕರೆಕೊಡುವುದು ಇನ್ನೊಂದು ವಿಷಯ, ಅವರ ಹತ್ತಿರವಿರುವುದರಿಂದ ಉಂಟಾದ ಒತ್ತಡ ಇನ್ನೂ ಬೇರೆಯಾದ ವಿಷಯ. ಭೌತಿಕವಾಗಿ ಅವರ ಹತ್ತಿರವಿರುವುದು ಯಾವುದೇ ವಿಶೇಷ ಕೃಪೆಯಿಂದಾಗಲಿ ಅಥವಾ ವಿಶೇಷ ದಯೆಯಿಂದಾಗಲಿ ಅಲ್ಲ, ಆದರೆ ಕಾರ್ಯಕ್ಕೆ ಅವಶ್ಯವಾಗಿರುವರು ಎಂಬ ಕಾರಣದಿಂದ, – ಅದನ್ನೇ ಇಲ್ಲಿರುವ ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಲು ಇಲ್ಲವೆ ನಂಬಲು ತಿರಸ್ಕರಿಸುತ್ತಾರೆ, ಆದರೆ ಅದು ವಾಸ್ತವ ಸಂಗತಿ: ಹತ್ತಿರವಿರುವಿಕೆ ಸ್ವಯಂಚಾಲಿತವಾಗಿ ಒತ್ತಡ ತರುತ್ತದೆ, ಅದು ಬೇರೆ ಯಾವುದಕ್ಕಾಗಿ ಇರದೆ ಹೋದರೂ ಅವರು ತಮ್ಮ ಪ್ರಜ್ಞೆಯನ್ನು ಶ್ರೀಮಾತೆಯವರ ಪ್ರಜ್ಞೆಯೊಂದಿಗೆ ಸರಿಹೊಂದಿಸಿಕೊಳ್ಳುವುದಿರುತ್ತದೆ ಎಂದರೆ ಬದಲಾವಣೆ ಮಾಡಿಕೊಳ್ಳುವುದಿರುತ್ತದೆ, ಆದರೆ ಅದು ಅವರಿಗೆ ಕಠಿಣವಾದದ್ದು, ಏಕೆಂದರೆ ಪ್ರಜ್ಞೆಗಳ ನಡುವಿರುವ ಅಂತರ ವಿಶೇಷವಾಗಿ ಭೌತಿಕ ಸ್ತರದಲ್ಲಿ ಅಗಾಧವಾಗಿರುತ್ತದೆ, ಮತ್ತು ಅವರು ತಮ್ಮ ಕಾರ್ಯದಲ್ಲಿ ಶ್ರೀಮಾತೆಯವರನ್ನು ಭೌತಿಕ ಸ್ತರದಲ್ಲಿ ಭೇಟಿ ಮಾಡುತ್ತಾರೆ.

**(CWSA, 32/501)**

ಹಗಲು, ರಾತ್ರಿ ಶ್ರೀಮಾತೆಯವರ ಸಂಪರ್ಕ ಇದ್ದೇ ಇರುತ್ತದೆ. ಮನುಷ್ಯ ಆಂತರಿಕವಾಗಿ ಅವರೊಡನೆ ಸರಿಯಾದ ಸಂಪರ್ಕವನ್ನು ಇರಿಸಿಕೊಂಡಿದ್ದರೆ ಪ್ರಣಾಮ ಅದರ ಫಲವನ್ನು ತಂದುಕೊಡುತ್ತದೆ, ಏಕೆಂದರೆ ನೀವು ಅದನ್ನು ಸ್ವೀಕರಿಸಲು ಸರಿಯಾದ ಸ್ಥಿತಿಯಲ್ಲಿರುತ್ತೀರಿ.

**(SABCL, 25/288)** **– ಶ್ರೀ ಅರವಿಂದರು**

**ಪ್ರಶ್ನೆ :** *ಇಂದು ಅಟ್ಟದ ಮೇಲಿರುವ ಶ್ರೀಮಾತೆಯವರ ಕೋಣೆಗಳಿಗೆ ಹೋಗಿ ಅವರ ಹತ್ತಿರ ಇರಬೇಕೆಂಬ ಗಾಢವಾದ ಆಸೆಯುಂಟಾಗಿತ್ತು.*

**ಶ್ರೀ ಅ :** ಅದರೆ ಶ್ರೀಮಾತೆಯವರಿಗೆ ಹತ್ತಿರ ಬರುವುದು ಆಂತರಿಕ ಕೋಣೆ–ಗಳಲ್ಲಾಗಬೇಕು, ಬಾಹ್ಯದಲ್ಲಲ್ಲ. ಏಕೆಂದರೆ ಆಂತರಿಕ ಕೋಣೆಗಳಲ್ಲಿ ಯಾವಾಗಲೂ

ಪ್ರವೇಶ ಮಾಡಬಹುದು ಮತ್ತು ಅಲ್ಲಿಯೇ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬಹುದು.

**(SABCL, 25/292)** – ಶ್ರೀ ಅರವಿಂದರು

*



ನಾನು ಎಲ್ಲ ವಸ್ತು–ವಿಷಯಗಳಲ್ಲಿ ಒಳನುಗ್ಗಿ ಹೋಗುತ್ತೇನೆ, ಪ್ರತಿಯೊಂದು ಅಣುವಿನ ಹೃದಯದಲ್ಲಿ ಜೀವಿಸುತ್ತಿದ್ದು ಅಲ್ಲಿ ಅಗ್ನಿ ಪ್ರಜ್ವಲಿಸುವಂತೆ ಮಾಡುತ್ತೇನೆ, ಅದು ಪರಿಶುದ್ಧಗೊಳಿಸುತ್ತದೆ ಹಾಗೂ ರೂಪಪರಿವರ್ತನೆ ಮಾಡುತ್ತದೆ, ಎಂದಿಗೂ ನಂದಿಹೋಗದ ಅಗ್ನಿಯಾಗಿರುವ ಅದು ಭಗವಂತ, ನಿನ್ನ ಪರಮ ಸೌಖ್ಯಗಳ ಸಂದೇಶವಾಹಕವಾಗಿರುತ್ತದೆ, ಎಲ್ಲ ಪರಿಪೂರ್ಣತೆಗಳನ್ನು ಸಿದ್ಧಿಸಿಕೊಳ್ಳುವಂತಹ–ದಾಗಿರುತ್ತದೆ.



ನಂತರ ಈ ಪ್ರೇಮವೇ ಧ್ಯಾನದ ಸ್ಥಿತಿಯಲ್ಲಿ ಮೌನವಾಗಿ ಬೆಳೆಯುತ್ತದೆ ಮತ್ತು ಓ ಅಜ್ಞಾತವಾದ ದೈವೀ ವೈಭವವುಳ್ಳವನೆ, ದಿವ್ಯಾನಂದದಲ್ಲಿ ಅದು ನಿನ್ನ ಹೊಸ ದೈವೀ ಪ್ರಕಟಣೆಗಾಗಿ ಕಾದುಕೊಂಡಿರುತ್ತದೆ.

**(CWM, 1/164)** – ಶ್ರೀಮಾತೆ

*

## ಮೂರ್ತರೂಪದ ದೈವೀ ಸಾನ್ನಿಧ್ಯ

ನಿಮ್ಮ ಮೇಲೆ ದೇವನ ಶಾಂತಿ ಅವರೋಹಣ ಮಾಡಿದಾಗ, ನಿಮ್ಮ ಅಂತರಂಗದಲ್ಲಿ ದೈವೀ ಸಾನ್ನಿಧ್ಯವಿದ್ದಾಗ, ದೈವೀ ಆನಂದ ನಿಮ್ಮ ಮೇಲೆ ಸಾಗರದ ಹಾಗೆ ಧುಮ್ಮಿಕ್ಕಿ ಬಂದಾಗ, ನೀವು ತರಗೆಲೆಯೇನೋ ಎನ್ನುವ ಹಾಗೆ ದೈವೀ ಶಕ್ತಿಯ ಉಸಿರು ನಿಮ್ಮನ್ನು ಮುಂದೂಡುತ್ತಿದ್ದಾಗ, ನಿಮ್ಮಿಂದ ದೈವೀ ಪ್ರೇಮ ಎಲ್ಲ ಸೃಷ್ಟಿಯ ಮೇಲೆ ಹರಿದು ಹೋಗುತ್ತಿದ್ದಾಗ, ಮೊದಲು ಅಂಧಕಾರದಲ್ಲಿದ್ದ ವೇದನಾಪೂರ್ಣವಾಗಿದ್ದ ಮಬ್ಬಾಗಿದ್ದ ಎಲ್ಲವನ್ನೂ ಕ್ಷಣಮಾತ್ರದಲ್ಲಿ ಪ್ರಕಾಶಕ್ಕೊಳ–ಪಡಿಸುವ ಹಾಗೂ ಪರಿವರ್ತನೆಗೆ ಒಳಪಡಿಸುವ ದೈವೀ ಜ್ಞಾನ ನಿಮ್ಮ ಮೇಲೆ ಪ್ರವಾಹ ರೂಪದಲ್ಲಿ ಹರಿದು ಬಂದಾಗ, ಇರುವುದೆಲ್ಲವೂ ದೈವೀ ನೈಜತೆಯ ಒಂದು ಭಾಗವಾದಾಗ, ದೈವೀ ನೈಜತೆ ನಿಮ್ಮ ಸುತ್ತಲೂ ಇದ್ದಾಗ, ಆ ಆಧ್ಯಾತ್ಮಿಕ ಸಂಪರ್ಕ, ಆಂತರಿಕ ದರ್ಶನ, ಪ್ರಕಾಶಿತ ಹಾಗೂ ದರ್ಶನ ಮಾಡಿಸುವ ಯೋಚನೆ ಇವುಗಳ ಮೂಲಕ, ಪ್ರಾಣಿಕ ಸಂವೇದನೆಯಿಂದ ಹಾಗೂ ಭೌತಿಕ ಇಂದ್ರಿಯದಿಂದಲೂ ಕೂಡ ಎಲ್ಲೆಡೆಯಲ್ಲಿ ನೀವು ಕೇವಲ ಭಗವಂತನನ್ನು ನೋಡುತ್ತೀರಿ, ಅವನ ಧ್ವನಿ ಕೇಳುತ್ತೀರಿ ಹಾಗೂ ಅವನ ಸ್ಪರ್ಶ ಪಡೆಯುತ್ತೀರಿ.

**(CWSA, 28/339)**

**ಪ್ರಶ್ನೆ :** *ಸ್ವಾಮಿ, ನಾನು ನಿನ್ನೆ ರಾತ್ರಿ ಭಾವನೆಗೆ ತಂದುಕೊಂಡ ಇದೇನು? ಅದು ನನ್ನ ಹಣೆಯ ಮೇಲೆ ಬೆಚ್ಚಗಿನ ಸ್ಪರ್ಶವಾಗಿತ್ತು. ದರ್ಶನದ ವೇಳೆಗೆ ನಿಮ್ಮ ಪಾದಗಳಿರುವ ಹಾಗೆ ಅದು ಬೆಚ್ಚಗಾಗಿತ್ತು. ಆದರೆ ಅದು ಎಷ್ಟೊಂದು ಒಮ್ಮೆಗೆ ಆಯಿತೆಂದರೆ ಅದರ ಬಗ್ಗೆ ನಾನು, ಬಹುಮಟ್ಟಿಗೆ, ಸಂಶಯಪಡುವಂತಾಯಿತು. ಇಂತಹ ಸ್ಪರ್ಶಗಳು ಸಾಧ್ಯವಾಗಿರುತ್ತವೆಯೇ?*


**ಶ್ರೀ ಅ :** ಸಾಧ್ಯವಿದೆ! ಪ್ರಶ್ನೆ ಎಷ್ಟೊಂದು ಅಸಂಗತವಾಗಿದೆ! ಸಾಧನೆಯಲ್ಲಿ ಅಂತಹ ಸ್ಪರ್ಶಗಳು ಸಾಮಾನ್ಯವಾಗಿ ಅನುಭವಕ್ಕೆ ಬರುತ್ತವೆ. ಹಾಗಿದ್ದರೂ ಅಲ್ಲಿ ಭಿನ್ನ

ಬಗೆಯ ಸ್ಪರ್ಶಗಳಿವೆ. ಕೆಲವೊಮ್ಮೆ ಸ್ಪರ್ಶ ವೈಯಕ್ತಿಕವಾಗಿರುತ್ತದೆ, ಕೆಲವೊಮ್ಮೆ ಮೇಲ್ಗಡೆಗಿರುವ ದೈವೀ ಸಾಮರ್ಥ್ಯದ ಇಲ್ಲವೆ ದೈವೀ ಸಾನ್ನಿಧ್ಯದ ಸ್ಪರ್ಶವಾಗಿರುತ್ತದೆ. ಬಹಳಷ್ಟು ಜನರು ಬೆಚ್ಚಗಿನ ಅನುಭವ ಪಡೆಯುವುದಿಲ್ಲ, ಆದರೆ ಬೆಚ್ಚಗಾಗಿರುವ ಏನೋ ಒಂದರ ತರಂಗ ಅವರೋಹಣ ಮಾಡುತ್ತಿರುವುದರ ಅನುಭವ ಪಡೆಯುತ್ತಾರೆ.

**(Correspondence with Sri Aurobindo, Nirodbaran, pp. 390–91)**

ಬಾಹ್ಯ ಸ್ಪರ್ಶ ಸಹಾಯಕವಾಗಿರುತ್ತದೆ, ಆದರೆ ಆಂತರಿಕ ಸ್ಪರ್ಶವನ್ನು ಸ್ವಲ್ಪ ಮಟ್ಟಿಗಿನ ಮೂರ್ತಸ್ವರೂಪದೊಂದಿಗೆ ಪಡೆಯುವುದನ್ನು ರೂಢಿಸಿಕೊಂಡಿದ್ದರೆ ಅದು ಇನ್ನೂ ಹೆಚ್ಚು ಸಹಾಯಕವಾಗಿರುತ್ತದೆ – ಬಾಹ್ಯ ಸ್ಪರ್ಶವನ್ನು ಪಡೆಯುವುದು ಯಾವಾಗಲೂ ಪೂರ್ಣ ರೂಪದಲ್ಲಿ ಸಾಧ್ಯವಾಗುವುದಿಲ್ಲ, ಅದು ಹಾಗಿರುವಾಗ ಆಂತರಿಕ ಸ್ಪರ್ಶ ಯಾವಾಗಲೂ ಅಲ್ಲಿರುತ್ತದೆ.

*



**ಸತತವಿರುವ ದೈವೀ ಸಾನ್ನಿಧ್ಯ**

ಪರಮೋಚ್ಚನ ಹಾಗೂ ಶ್ರೀಮಾತೆಯವರ ಕಣ್ಣುಗಳಡಿಯಲ್ಲಿಯೇ ಇರುವಂತೆ ಯಾವಾಗಲೂ ಜೀವಿಸು. ದೈವೀ ಸಾನ್ನಿಧ್ಯಕ್ಕೆ ಯೋಗ್ಯವಾಗಿರದ ಏನನ್ನೂ ಯೋಚಿಸುವುದು ಬೇಡ ಹಾಗೂ ಭಾವನೆಗೆ ತಂದುಕೊಳ್ಳುವುದು ಬೇಡ.

**(CWSA, 32/172)** **– ಶ್ರೀ ಅರವಿಂದರು**



ಬಾಹ್ಯ ಮಾರ್ಗದರ್ಶನ ಆಂತರಿಕ ಕಾರ್ಯಗತಿಗೆ ಸಹಾಯಕ ಎಂಬ ಅರ್ಥದಲ್ಲಿರುತ್ತದೆ, ಅದು ತಪ್ಪಾದ ಯಾವುದೋ ಚಲನೆಯನ್ನು ಸರಿಪಡಿಸುವುದಕ್ಕಾಗಿ ಇರುತ್ತದೆ ಮತ್ತು ಕೆಲವೊಮ್ಮೆ ಸರಿಯಾದ ಮಾರ್ಗವನ್ನು ತೋರಿಸಿಕೊಡುವುದಕ್ಕಾಗಿ ಇರುತ್ತದೆ. ಪ್ರಾರಂಭದ ಹಂತವನ್ನು ಹೊರತುಪಡಿಸಿ ಅದು ಮಾನಸಿಕ ಸ್ತರದ ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕಾಗಿಯಾಗಲಿ, ಇಲ್ಲವೆ ಮಾನಸಿಕ ಚಟುವಟಿಕೆಗೆ ಉತ್ತೇಜನ ನೀಡುವುದಕ್ಕಾಗಲಿ ಇರುವುದಿಲ್ಲ.

*

ನನ್ನ ಸ್ಪರ್ಶ ಯಾವಾಗಲೂ ಅಲ್ಲಿರುತ್ತದೆ, ಆದರೆ ನೀನು ಅದನ್ನು ಕೇವಲ ಬಾಹ್ಯ ಮಾಧ್ಯಮದ ಮೂಲಕ – ಲೇಖನಿಯಿಂದ ಬರೆದದ್ದರ ಮೂಲಕ – ಪಡೆಯಬೇಕಷ್ಟೇ ಅಲ್ಲ, ಆದರೆ ಮನಸ್ಸು, ಹೃದಯ, ಪ್ರಾಣಿಕ ಹಾಗೂ ದೇಹ ಇವುಗಳ ಮೂಲಕವೂ ಕೂಡ ಭಾವನೆಗೆ ತಂದುಕೊಳ್ಳಬೇಕು. ಆಗ ತೊಂದರೆ ಇರುವುದರ ಪ್ರಮಾಣ ಕಡಿಮೆಯಾಗುತ್ತದೆ – ಇಲ್ಲವೆ ತೊಂದರೆ ಇರುವುದೇ ಇಲ್ಲ.

**(CWSA, 35/446–48)** **– ಶ್ರೀ ಅರವಿಂದರು**

**ಪ್ರಶ್ನೆ :** *ಶ್ರೀಮಾತೆಯವರೆ, ನಿಮ್ಮದು ಮಾತೆಯ ಪ್ರೇಮ, ಅದು ಪ್ರತಿಯಾಗಿ ಏನನ್ನೂ ಕೇಳುವುದಿಲ್ಲ ಎಂದು ನೀವು ಹೇಳಿರುವುದು ನಿಮ್ಮ ಮಾಧುರ್ಯದ ವಿಶೇಷವಾಗಿದೆ. ಅದು ನಿಮಗೆ ಸರಿಯಾದದ್ದೇ, ಏಕೆಂದರೆ ನಿಮ್ಮದು ಸ್ವ–ನೆರವೇರಿಕೆ ಕಂಡುಕೊಂಡ ಜೀವನ, ಆದರೆ ನಾನು ಎಲ್ಲವನ್ನೂ ಸಿದ್ಧಿಸಿಕೊಳ್ಳಬೇಕಾಗಿದೆ, ನನ್ನ ಮಾನವ ಅಸ್ತಿತ್ವಕ್ಕೆ ಇನ್ನೂ ಸಮಾಧಾನ ಕಂಡುಕೊಳ್ಳಬೇಕಾಗಿದೆ. ನನ್ನ ಜೀವವನ್ನು ಹಾಗೂ ನನ್ನ ಆತ್ಮವನ್ನು ತಿಳಿದುಕೊಳ್ಳಬೇಕಾಗಿದೆ, ದೈವೀ ಪ್ರಮುಖಳಾದವಳನ್ನು ಅರಿತುಕೊಂಡು ಅವಳಿಗೆ ನನ್ನ ಪ್ರೇಮವನ್ನು ಸಲ್ಲಿಸಬೇಕಾಗಿದೆ ಮತ್ತು ಅವಳ ನೆರವೇರಿಕೆಯನ್ನು ನನ್ನ ಜೀವನದಲ್ಲಿ ಕಂಡುಕೊಳ್ಳಬೇಕಾಗಿದೆ ಮತ್ತು ಅವಳ ದೈವೀ ಸಂಕಲ್ಪವಿದ್ದರೆ ನಾನು ಜಗತ್ತುಗಳನ್ನು ಅರಿತುಕೊಳ್ಳುವುದಿದೆ. ಅದಕ್ಕೂ ಹೆಚ್ಚಾಗಿ ನಾನು ಆದ್ಯಾಶಕ್ತಿ, ಮಹಾಕಾಳಿ, ಜಗನ್ಮಾತೆಯ ದರ್ಶನ ಪಡೆಯಬೇಕಾಗಿದೆ. ನನಗೆ ಯಾವುದು ಅತ್ಯಂತ ಒಳ್ಳೆಯದೆಂದು ಅವಳು ತಿಳಿದುಕೊಳ್ಳುವಳು. ಅವಳ ಪಾದಗಳತ್ತ ಕರೆದೊಯ್ಯಲು ಗುರುವಿಲ್ಲದೆ ಅದನ್ನು ನನಗೆ ಹೇಗೆ ಕೈಕೊಳ್ಳಲು ಸಾಧ್ಯವಾದೀತು?*

**ಶ್ರೀಮಾತೆ :** ನಿನ್ನನ್ನು ಮಹಾಶಕ್ತಿಯ ಪಾದಗಳತ್ತ ಕರೆದೊಯ್ಯಲು ಶ್ರೀ ಅರವಿಂದರಿ–ಗಿಂತ ಹೆಚ್ಚು ದಕ್ಷರಾದವರು ನನಗೆ, ಜಗತ್ತಿನಲ್ಲಿ, ಬೇರೆಡೆ ಎಲ್ಲಿಯೂ ಇರುವುದು ಕಂಡುಬರುತ್ತಿಲ್ಲ.

ನನ್ನ ಪ್ರೀತಿ ಹಾಗೂ ಆಶೀರ್ವಾದಗಳೊಂದಿಗೆ

– **ಶ್ರೀಮಾತೆ**

**ಪ್ರಶ್ನೆ :** *ಮಧುರ ಮಾತೆಯವರೆ, ನಿಮಗೆ ಅತಿ ಹೆಚ್ಚಿನ ಮೊತ್ತದಲ್ಲಿ ನನ್ನ ಪ್ರೇಮವನ್ನು ನಿಮ್ಮೆಡೆಗೆ ಕಳಿಸುತ್ತಿದ್ದೇನೆ. ನನ್ನ ಹೃದಯ ಕಮಲದಲ್ಲಿ ನಿಮ್ಮ ಪಾದ ಕಮಲಗಳು ಪ್ರೇಮದ ಸಿಂಹಾಸನದ ಮೇಲೆ ಶಾಶ್ವತವಾಗಿ ನೆಲೆಗೊಳ್ಳುವಂತಾಗಲಿ.*

**ಶ್ರೀಮಾತೆ :** ಇಷ್ಟೊಂದು ಪ್ರೇಮ ತೋರಿಸುವ ಮುದ್ದು ಮಗುವೆ, ನಿನ್ನ ಪ್ರೇಮದಿಂದಾಗಿ ನಿನ್ನ ಹೃದಯ ಅತ್ಯಂತ ಮಧುರವಾದ ಸ್ಥಾನವಾಗಿದೆ – ಅಲ್ಲಿ ನಾನು ಯಾವಾಗಲೂ ಇರುವಂತಾಗಲಿ, ಅದರಿಂದಾಗಿ ನಿನ್ನ ಇಡೀ ಸತ್ತೆ ಪ್ರಕಾಶ, ಪ್ರೇಮ ಹಾಗೂ ಸಂತೋಷಗಳಿಂದ ತುಂಬಿಕೊಳ್ಳುವಂತಾಗಲಿ.

ನನ್ನ ಪ್ರೇಮ ಹಾಗೂ ಆಶೀರ್ವಾದಗಳೊಂದಿಗೆ

– **ಶ್ರೀಮಾತೆ**

*

**ಪ್ರಶ್ನೆ :** *ಓ, ದೈವೀ ಮಾತೆಯವರೆ! ನನ್ನ ಹೃದಯದ ರಹಸ್ಯ ಗುಹೆಗಳಲ್ಲಿ ನೀವು ದೈವೀ ಮಾತೆಯ ಅವತಾರ ಎಂಬುದರ ಬಗ್ಗೆ ಸಹಜವಾದ ನಂಬಿಕೆಯಿದೆ ಎಂಬುದನ್ನು ಅರಿತಿದ್ದೇನೆ; ಅವಳನ್ನು ನಾನು ಆರಾಧಿಸುತ್ತೇನೆ, ಆದರೆ ಅವಳ ಪಾದ ಕಮಲಗಳ ಹೊರತಾಗಿ ಅವಳನ್ನು ಪೂರ್ತಿಯಾಗಿ ತಿಳಿದುಕೊಂಡಿಲ್ಲ, ಆ ಕಾರಣದಿಂದಾಗಿ ನನ್ನ ಕಣ್ಣುಗಳು ಅವಳನ್ನು ನಿಮ್ಮ ಪಾದ ಕಮಲಗಳಲ್ಲಿ ಅರಸುತ್ತಿವೆ, ಮತ್ತು ನನ್ನ ಹೃದಯ ಅವುಗಳನ್ನು ತಾನು ಮಾತ್ರ ಏಕೈಕ ಆಶ್ರಯ ಸ್ಥಾನವೆಂದು ತಿಳಿದು ಅದಕ್ಕೆ ಒತ್ತಿಹಿಡಿಯಲು ಹಂಬಲಿಸುತ್ತಿದೆ.*

**ಶ್ರೀಮಾತೆ :** ನನ್ನ ಅತಿ ಮುದ್ದಿನ ಮಗುವೆ, ಪ್ರಜ್ಞಾಪೂರ್ಣ ನಿಶ್ಚಿತತೆಯ ದೈವೀ ಪ್ರಕಾಶ ಮತ್ತು ಎಂದೆಂದಿಗೂ ಉಳಿದುಕೊಳ್ಳುವ ದೈವೀ ಸಾನ್ನಿಧ್ಯದ ಸಂತೋಷ ನಿನ್ನೊಡನೆ ದೈವೀ ಪ್ರೇಮದ ಮಾಧುರ್ಯದಲ್ಲಿ ಮೂರ್ತರೂಪದೊಂದಿಗೆ ಸದಾ ಇರುವಂತಾಗಲಿ.

**(CWM, 16/207–09)**



**ಪ್ರಶ್ನೆ :** *ಮಧುರ ಮಾತೆಯವರೆ ನಾನು ಇದೀಗ ಕೇಳಿದ್ದು ಹೀಗಿದೆ: ದೈವೀ ಕೃಪೆ ಗುರುವಿನ ಎಲ್ಲ ಅಂಗಗಳಿಂದ (ಕಣ್ಣುಗಳಿಂದ, ಕೈಗಳಿಂದ ಇತ್ಯಾದಿ) ಹರಿದು ಬರುತ್ತಿದ್ದರೂ ಅವನ ಪಾದಗಳಿಂದ ಹೊರಹೊಮ್ಮುತ್ತಿರುವುದು ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಮತ್ತು ಕರುಣೆಯಿಂದ ತುಂಬಿಕೊಂಡಿರುತ್ತದೆ. ಆ ಕಾರಣದಿಂದಾಗಿ ಭಾರತೀಯ ಸಂಪ್ರದಾಯದಲ್ಲಿ ಪ್ರಣಾಮವನ್ನು ಪಾದಗಳಿಗೆ ಮಾಡಬೇಕು ಎಂದು ಹೇಳಲಾಗಿದೆ. ಇದು ಸತ್ಯವಾದದ್ದೇ?*

**ಶ್ರೀಮಾತೆ :** ನಿನ್ನ ಪ್ರಶ್ನೆಗೆ ಶ್ರೀ ಅರವಿಂದರ ಉತ್ತರ ಇಲ್ಲಿ ಹೀಗಿದೆ:

– ಅವಳು ತನ್ನ ಪಾದ ಊರಿದಲ್ಲೆಲ್ಲ ಪರವಶಗೊಳಿಸುವ ಆನಂದದ ಪ್ರವಾಹಗಳು ಹರಿದು ಹೋಗುತ್ತವೆ.

ಮತ್ತು

ಜೀವನದ ನೋವು ನೀಡುತ್ತಿರುವ ಮಿಡಿತವನ್ನು ತನ್ನ ಪಾದಗಳಿಂದ ವಾಸಿಮಾಡಲು ಎಲ್ಲ ಪ್ರಕೃತಿ ಮೂಕವಾಗಿ ಅವಳಿಗೆ ಕರೆ ಕೊಡುತಿಹುದು.

**(CWM, 17/390)** – **ಶ್ರೀಮಾತೆ**

*

**ನಾನು ನಿಮ್ಮೊಡನಿದ್ದೇನೆ**

ನಾನು ನಿಮ್ಮೊಡನಿದ್ದೇನೆ, ಏಕೆಂದರೆ ನಾನು ನೀವಾಗಿರುವಿರಿ, ನೀವು ನಾನಾಗಿದ್ದೇನೆ. ನಾನು ನಿಮ್ಮೊಡನಿದ್ದೇನೆ ಎಂಬುದು ಜಗತ್ತನ್ನು ತುಂಬಿಬಿಡುವಷ್ಟು ವಿಷಯಗಳಿಗೆ ಪ್ರಾಮುಖ್ಯತೆ ನೀಡುತ್ತದೆ, ಏಕೆಂದರೆ ನಾನು ನಿಮ್ಮ ಎಲ್ಲ ಸ್ತರಗಳಲ್ಲಿ, ಎಲ್ಲ ಪ್ರಾಂತಗಳಲ್ಲಿ ಪರಮೋಚ್ಚ ಪ್ರಜ್ಞೆಯಿಂದ ಹಿಡಿದು ನನ್ನ ಅತ್ಯಂತ ಭೌತಿಕ ಪ್ರಜ್ಞೆಯವರೆಗೆ ನಿಮ್ಮೊಡನಿದ್ದೇನೆ. ಇಲ್ಲಿ ಪಾಂಡಿಚೇರಿಯಲ್ಲಿ ನನ್ನ ಪ್ರಜ್ಞೆಯನ್ನು ಉಸಿರಿಗೆ ತಂದುಕೊಳ್ಳದೆ ನೀವು ಉಸಿರಾಡಿಸಲಾರಿರಿ. ಅದು ಸೂಕ್ಷ್ಮ ಭೌತಿಕದಲ್ಲಿ ವಾತಾವರಣವನ್ನು, ಬಹುಮಟ್ಟಿಗೆ, ಭೌತಿಕವಾಗಿ ಗರಿಷ್ಠ ಮಿತಿಯಲ್ಲಿ ತುಂಬಿ ಬಿಡುತ್ತದೆ. ಮತ್ತು ಅದು ಇಲ್ಲಿಂದ ಹತ್ತು ಕಿಲೋಮೀಟರ ದೂರದಲ್ಲಿರುವ ಕೆರೆಯವರೆಗೆ ವಿಸ್ತರಿಸಿಕೊಂಡಿರುತ್ತದೆ. ಅದಕ್ಕಿಂತ ಹೆಚ್ಚಿನ ದೂರದಲ್ಲಿ ನನ್ನ ಭೌತಿಕ–ಪ್ರಾಣಿಕದ ಬಗ್ಗೆ ಭಾವನೆ ತಂದುಕೊಳ್ಳಬಹುದು, ನಂತರ ಮಾನಸಿಕ ಹಾಗೂ ಉಚ್ಚತರ ಸ್ತರಗಳಲ್ಲಿ, ಎಲ್ಲೆಡೆಯಲ್ಲಿ ನನ್ನ ಪ್ರಜ್ಞೆಯನ್ನು ಭಾವನೆಗೆ

ತಂದುಕೊಳ್ಳಬಹುದು. ನಾನು ಇಲ್ಲಿ ಮೊಟ್ಟಮೊದಲು ಬಂದಾಗ, ಹತ್ತು ನಾವಿಕರ ಮೈಲುಗಳಷ್ಟು ದೂರದಲ್ಲಿರುವಾಗಲೇ (ಹತ್ತು ಕಿಲೋಮೀಟರಗಳಷ್ಟಲ್ಲ) ಶ್ರೀ ಅರವಿಂದರ ವಾತಾವರಣವನ್ನು ಭೌತಿಕವಾಗಿ ಭಾವನೆಗೆ ತಂದುಕೊಂಡೆ. ಅದು ಒಮ್ಮೆಗೆ, ಮೂರ್ತರೂಪದಲ್ಲಿ ಬಂದಿತು, ಅದು ಪರಿಶುದ್ಧ ಜ್ಯೋತಿರ್ಮಯವಾದ, ನಿಮ್ಮನ್ನು ಎತ್ತಿಹಿಡಿಯಬಲ್ಲ ಪ್ರಕಾಶದಂತಿತ್ತು.

"ಶ್ರೀಮಾತೆಯವರು ನಿಮ್ಮತ್ತ ನೋಡುತ್ತಿದ್ದಾರೆಂಬ ಅರಿವಿನಿಂದ ನಡೆದು–ಕೊಳ್ಳಿರಿ, ಏಕೆಂದರೆ, ನಿಜವಾಗಿ, ಅವರು ಯಾವಾಗಲೂ ಉಪಸ್ಥಿತರಿರುತ್ತಾರೆ" ಎಂಬ ನೆನಪಿಗೆ ತಂದುಕೊಡುವ ವಾಕ್ಯವನ್ನು ಶ್ರೀ ಅರವಿಂದರು ಬರೆಸಿ ಎಲ್ಲೆಡೆಯಲ್ಲಿ ಹಾಕಿಸಿದ್ದು ನಿಮಗೆ ತಿಳಿದಿರಬಹುದು.

ಇದು ಕೇವಲ ಪದಗುಚ್ಛವಲ್ಲ, ಶಬ್ದಗಳು ಮಾತ್ರ ಇಲ್ಲಿರುವುದಿಲ್ಲ, ಆದರೆ ಅದು ವಾಸ್ತವ ಸಂಗತಿ. ನಾನು ನಿಮ್ಮೊಡನೆ ಬಹಳ ಮೂರ್ತರೂಪದಲ್ಲಿ ಇರುತ್ತೇನೆ, ಸೂಕ್ಷ್ಮ ದೃಷ್ಟಿಯುಳ್ಳವರು ನನ್ನನ್ನು ನೋಡಬಲ್ಲರು.

ಸರ್ವಸಾಮಾನ್ಯ ರೀತಿಯಲ್ಲಿ ನನ್ನ ದೈವೀ ಶಕ್ತಿ ಇಲ್ಲಿ ಸತತ ಕಾರ್ಯ ಕೈಕೊಳ್ಳುತ್ತಿರುತ್ತದೆ, ನಿಮ್ಮ ಸತ್ತೆಯ ಮನಶ್ಶಾಸ್ತ್ರೀಯ ಅಂಶಗಳನ್ನು ಹೊಸ ಸಂಬಂಧಗಳಲ್ಲಿ ಸ್ಥಾನಾಂತರಗೊಳಿಸುತ್ತದೆ, ಮತ್ತು ನಿಮ್ಮ ಸ್ವಭಾವದ ಭಿನ್ನ ಮುಖಗಳಿಗೆ ನಿಮಗಾಗಿ ವ್ಯಾಖ್ಯೆ ನೀಡುತ್ತದೆ, ಅದರಿಂದಾಗಿ ಯಾವುದನ್ನು ಬದಲು ಮಾಡಬೇಕು, ಅಭಿವೃದ್ಧಿಗೊಳಿಸಬೇಕು ಮತ್ತು ತಿರಸ್ಕರಿಸಬೇಕು ಎಂಬುದನ್ನು ನೀವು ನೋಡುವಂತಾಗುತ್ತದೆ.

ನಿಜವಾಗಿ ನಾನು ಪ್ರತಿಯೊಬ್ಬನಿಗೂ ಜವಾಬ್ದಾರಳಾಗಿದ್ದೇನೆ, ನನ್ನ ಜೀವನದಲ್ಲಿ ಕ್ಷಣ ಮಾತ್ರಕ್ಕೆ ಆಗಲಿ ನಾನು ಭೇಟಿ ಮಾಡಿದವರಿಗಾಗಿಯೂ ಕೂಡ ನಾನು ಜವಾಬ್ದಾರಳಾಗಿದ್ದೇನೆ.

ನೀವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಒಂದು ವಿಷಯವಿದೆ. ನನ್ನ ಹಾಗೂ ಶ್ರೀ ಅರವಿಂದರ ಪ್ರಜ್ಞೆ ಒಂದೇ ಆಗಿದೆ, ಒಂದೇ ವ್ಯಕ್ತಿಯಾಗಿದ್ದೇವೆ. ಒಂದೇ ಆದ ಈ ಶಕ್ತಿ ಇಲ್ಲವೆ ಈ ಸಾನ್ನಿಧ್ಯ ನಿಮ್ಮ ವ್ಯಕ್ತಿಗತ ಪ್ರಜ್ಞೆಯ ಮೂಲಕ ಹಾದುಹೋದಾಗ ಮಾತ್ರ ಅದು ಒಂದು ರೂಪವನ್ನು ಇಲ್ಲವೆ ತೋರಿಕೆಯನ್ನು ಧಾರಣ ಮಾಡುತ್ತದೆ; ನಿಮ್ಮ ಮನೋಭಾವ, ಅಭೀಪ್ಸೆ, ನಿಮ್ಮ ಆವಶ್ಯಕತೆ ಹಾಗೂ ನಿಮ್ಮ ಸತ್ತೆಯ ವಿಶಿಷ್ಟ ತಿರುವು ಇವುಗಳಿಗನುಸಾರವಾಗಿ ಈ ತೋರಿಕೆ ಭಿನ್ನವಾಗಿರುತ್ತದೆ. ನಿಮ್ಮ ವೈಯಕ್ತಿಕ



ಪ್ರಜ್ಞೆ ಒಂದು ಶೋಧಕ(filter), ಒಂದು ತೋರುಗಡ್ಡಿ(pointer) ಹಾಗಿರುತ್ತದೆ, ಅದು ಅನಂತ ದೈವೀ ಸಾಧ್ಯತೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಅದನ್ನು ಸ್ಥಿರಗೊಳಿಸುತ್ತದೆ. ನೈಜತೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಭಗವಂತ ತನ್ನಿಂದ ನಿರೀಕ್ಷಿಸಿದ್ದನ್ನು ಕೊಡುತ್ತಾನೆ. ಭಗವಂತ ದೂರದಲ್ಲಿದ್ದಾನೆ ಹಾಗೂ ಕ್ರೂರನಾಗಿದ್ದಾನೆ ಎಂದು ನೀವು ನಂಬಿದ್ದರೆ, ಅವನು ದೂರವಿರುತ್ತಾನೆ ಮತ್ತು ಕ್ರೂರನಾಗುತ್ತಾನೆ, ಏಕೆಂದರೆ ಅವನ ಕ್ರೋಧವನ್ನು ನೀವು ಭಾವನೆಗೆ ತಂದುಕೊಳ್ಳುವುದು ಕೊನೆಯಲ್ಲಿ ನೀವು ಕಂಡುಕೊಳ್ಳಬಹುದಾದುದಕ್ಕೆ ಅವಶ್ಯವಾಗಿರುತ್ತದೆ. ಅವನು ಮಹಾಕಾಳಿಯ ಪೂಜೆ ಮಾಡುವವರಿಗೆ ಮಹಾಕಾಳಿಯಾಗಿರುತ್ತಾನೆ, ಭಕ್ತನಿಗೆ ಸ್ವರ್ಗಸುಖ ಕೊಡುವವನಾಗಿರುತ್ತಾನೆ, ಮತ್ತು ಜ್ಞಾನವನ್ನು ಅರಸುವವನಿಗೆ ಅವನು ಎಲ್ಲ ದೈವೀ ಜ್ಞಾನವಾಗಿರುತ್ತಾನೆ, ಮಾಯಾವಾದಿಗೆ ವಿಶ್ವಾತೀತ ಅವ್ಯೆಯಕ್ತಿಕವಾದವನಾಗಿರುತ್ತಾನೆ. ನಾಸ್ತಿಕನಿಗೆ ನಾಸ್ತಿಕನಾಗಿರುತ್ತಾನೆ, ಪ್ರೇಮಿಗೆ ಅವನ ಪ್ರೇಮವಾಗಿರುತ್ತಾನೆ. ಪ್ರತಿಯೊಂದು ಚಲನೆಯಲ್ಲಿ ಪ್ರತಿಯೊಂದು ಕ್ಷಣ ಅವನನ್ನು ಮಾರ್ಗದರ್ಶಿಯೆಂದು ಭಾವನೆ ಮಾಡಿಕೊಂಡವರಿಗೆ, ಅವನು ಸಹೋದರನಂತಿರುತ್ತಾನೆ, ಹತ್ತಿರದವನಾಗಿರುತ್ತಾನೆ, ವಿಶ್ವಾಸಾರ್ಹ ಮಿತ್ರನಾಗಿರುತ್ತಾನೆ, ಸಹಾಯ ನೀಡಲು ಸದಾ ಸಿದ್ಧನಾಗಿರುತ್ತಾನೆ. ಅವನು ಎಲ್ಲವನ್ನೂ ಒರೆಸಿ ಹಾಕಬಲ್ಲವನೆಂದು ನೀವು ನಂಬಿದರೆ ನಿಮ್ಮೆಲ್ಲ ದೋಷಗಳನ್ನು, ತಪ್ಪುಗಳನ್ನು ದಣಿದುಕೊಳ್ಳದೆ ಒರೆಸಿ ಹಾಕುತ್ತಾನೆ, ಪ್ರತಿಕ್ಷಣ ಅವನ ಅನಂತ ದೈವೀ ಕೃಪೆಯ ಭಾವನೆ ತಂದುಕೊಳ್ಳಬಲ್ಲಿರಿ. ನಿಮ್ಮ ಆಳಾತಿ ಅಳದ ಅಭೀಪ್ಸೆಯಲ್ಲಿ ನೀವು ನಿರೀಕ್ಷಿಸಿದ ಹಾಗೆ ಅವನಿರುತ್ತಾನೆ.

ಮನುಷ್ಯರು ಹಾಗೂ ಭಗವಂತ ಇವರ ನಡುವೆ ಅನಂತ ಸಂಖ್ಯೆಯಲ್ಲಿರುವ ಸಂಬಂಧಗಳಲ್ಲಿ ಎಲ್ಲವನ್ನೂ ಒಂದೇ ನೋಟದಲ್ಲಿ ನೊಡುವ ಈ ಪ್ರಜ್ಞೆಯಲ್ಲಿ ನೀವು ಪ್ರವೇಶಿಸಿದಾಗ ಅದೆಲ್ಲವೂ ವಿವರಗಳಲ್ಲಿ ಅದೆಷ್ಟು ಅದ್ಭುತವಾಗಿದೆ ಎಂಬುದನ್ನು ನೋಡುತ್ತೀರಿ. ಮನುಕುಲದ ಇತಿಹಾಸದತ್ತ ನೀವು ನೋಡಬಲ್ಲಿರಿ ಮತ್ತು ಜನರು ತಿಳಿದುಕೊಂಡದ್ದರ, ಆಸೆ ಪಟ್ಟಿದ್ದರ, ನಿರೀಕ್ಷಿಸಿದ್ದರ ಹಾಗೂ ಕನಸು ಕಂಡಿದ್ದರ ಪ್ರಕಾರ ಭಗವಂತ ಎಷ್ಟರ ಮಟ್ಟಿಗೆ ಉತ್ಕ್ರಾಂತಿ ಹೊಂದಿದ್ದಾನೆಂಬುದನ್ನು ನೋಡುವಿರಿ ಮತ್ತು ಭೌತವಾದಿಯೊಂದಿಗೆ ಹೇಗೆ ಭೌತವಾದಿಯಾಗಿದ್ದ, ಮಾನವ ಪ್ರಜ್ಞೆ ತನ್ನನ್ನು ವಿಸ್ತರಿಸಿಕೊಂಡದ್ದಕ್ಕೆ ಅನುಗುಣವಾಗಿ ಪ್ರತಿದಿನ ಅವನು ಹೇಗೆ ಬೆಳೆಯುತ್ತಾನೆ ಹತ್ತಿರವಾಗುತ್ತಾನೆ, ಹೆಚ್ಚು ಪ್ರಕಾಶಮಯನಾಗುತ್ತಾನೆ ಎಂಬುದನ್ನು

ನೋಡುವಿರಿ. ಪ್ರತಿಯೊಬ್ಬನೂ ಆಯ್ದುಕೊಳ್ಳಲು ಮುಕ್ತನಾಗಿದ್ದಾನೆ. ಮನುಷ್ಯ ದೇವನೊಡನೆ ಹೊಂದಿರುವ ಸಂಬಂಧಗಳ ಈ ಕೊನೆಯಿಲ್ಲದ ವೈವಿಧ್ಯ ವರ್ಣನಾತೀತ ಅದ್ಭುತವಾಗಿದೆ. ಅದೆಲ್ಲ ಒಟ್ಟುಗೂಡಿ ಭಗವಂತನ ಇಡೀ ಪ್ರಕಟಣೆಯ ಒಂದು ಸೆಕೆಂಡಿನ ಕಾಲದಷ್ಟಾಗಿರುತ್ತದೆ.



ನಿಮ್ಮ ಅಭೀಪ್ಸೆಗನುಗುಣವಾಗಿ ಭಗವಂತ ನಿಮ್ಮೊಡನಿರುತ್ತಾನೆ. ಸ್ವಾಭಾವಿಕವಾಗಿ, ಅದರರ್ಥ ಅವನು ನಿಮ್ಮ ಸ್ವಭಾವದ ಬುದ್ಧಿ ಚಾಂಚಲ್ಯಕ್ಕೆ ಮಣಿಯುತ್ತಾನೆ ಎಂದಲ್ಲ – ನಾನಿಲ್ಲಿ ನಿಮ್ಮ ಸತ್ತೆಯ ಸತ್ಯವನ್ನು ಕುರಿತು ಮಾತನಾಡುತ್ತಿದ್ದೇನೆ. ಆದಾಗ್ಯೂ ಕೆಲವೊಮ್ಮೆ ಅವನು ನಿಮ್ಮ ಬಾಹ್ಯ ಅಭೀಪ್ಸೆಗಳಿಗೆ ಅನುಗುಣವಾಗಿ ತನ್ನನ್ನು ಹೊಂದಿಸಿಕೊಳ್ಳುತ್ತಾನೆ. ಮತ್ತು ಭಕ್ತರ ಹಾಗೆ ಪರ್ಯಾಯವಾಗಿ ಅವನೊಂದಿಗೆ ಏಕತೆಯಲ್ಲಿ ಹಾಗೂ ಪ್ರತ್ಯೇಕತೆಯಲ್ಲಿ ಜೀವಿಸುತ್ತಿದ್ದರೆ, ನಿಮ್ಮ ನಂಬಿಕೆಯ ಪ್ರಕಾರ ಭಗವಂತನೂ ಕೂಡ ನಿಮ್ಮೊಡನೆ ಏಕತೆಯಲ್ಲಿರುತ್ತಾನೆ ಮತ್ತು ಪ್ರತ್ಯೇಕತೆಯಲ್ಲಿರುತ್ತಾನೆ. ಹೀಗೆ ಮನೋಭಾವ, ಬಾಹ್ಯ ಮನೋಭಾವವೂ ಕೂಡ ಬಹಳ ಮಹತ್ವದ್ದು. ನಂಬಿಕೆ ಎಷ್ಟೊಂದು ಮಹತ್ವದ್ದು, ನಂಬಿಕೆ ಪವಾಡ ಸದೃಶವಾಗಿರುತ್ತದೆ. ಪವಾಡಗಳನ್ನು ಸೃಷ್ಟಿಸಿಬಲ್ಲದು ಎಂಬುದನ್ನು ಜನರು ತಿಳಿದುಕೊಂಡಿರುವುದಿಲ್ಲ. ನಿಮ್ಮನ್ನು ಮೇಲಕ್ಕೆತ್ತುವಂತಾಗಲಿ, ಮತ್ತು ಭಗವಂತನೆಡೆಗೆ ಎಳತಕ್ಕೊಳಗಾಗಲಿ ಎಂದು ಪ್ರತಿಕ್ಷಣ ನೀವು ನಿರೀಕ್ಷಿಸುತ್ತಿದ್ದರೆ ಅವನು ನಿಮ್ಮನ್ನು ಮೇಲಕ್ಕೆತ್ತಲು ಬರುತ್ತಾನೆ, ಅವನು ಅಲ್ಲಿ ನಿಮಗೆ ಅತಿ ಹತ್ತಿರದಲ್ಲಿ ಇರುತ್ತಾನೆ.



**(CWM, 13/73–76)** **– ಶ್ರೀಮಾತೆ**

*

## ಶ್ರೀಮಾತೆಯವರ ಧ್ವನಿ

**ಪ್ರೇಮ, ಪ್ರಕಾಶ ಹಾಗೂ ಕರುಣೆಗಳಿಂದ ತುಂಬಿಕೊಂಡ ಧ್ವನಿ:**

ನನ್ನ ಧ್ವನಿ ಸಾಧಾರಣವಾದದ್ದಲ್ಲ. ಈ ಧ್ವನಿ ಸ್ಪಷ್ಟ, ಪರಿಶುದ್ಧ ಹಾಗೂ ಪ್ರಶಾಂತವಾಗಿದ್ದು, ಪ್ರೇಮ, ಪ್ರಕಾಶಗಳಿಂದ ತುಂಬಿಕೊಂಡಿದೆ, ಅದಕ್ಕೂ ಹೆಚ್ಚಾಗಿ ಅದರಲ್ಲಿ ಅನಂತ ಕರುಣೆಯಿದ್ದು, ಅದು ಕೇಳಿಸಿಕೊಳ್ಳುವ ಎಲ್ಲರತ್ತ ವಿಸ್ತರಿಸುತ್ತ ಹೋಗುತ್ತದೆ. ಈ ಧ್ವನಿ ಎಷ್ಟೊಂದು ಮನವರಿಕೆ ಮಾಡಿಕೊಡುವ ರೀತಿಯಲ್ಲಿದೆ ಎಂದರೆ, ಅದು ಎಲ್ಲರ ಹೃದಯದಲ್ಲಿ ಉತ್ಸಾಹಪೂರ್ಣ ಅಭೀಪ್ಸೆಗೆ ಕರೆ ಕೊಡುತ್ತದೆ. ಅದರಲ್ಲಿ ವಾಸಿಮಾಡುವ ಪರಮೋಚ್ಚ ಸಾಮರ್ಥ್ಯವಿದೆ ಮತ್ತು ಅದರ ಕಂಪನಗಳು ಎಲ್ಲ ತೊಂದರೆಗಳನ್ನು ತೆಗೆದುಹಾಕುತ್ತವೆ ಮತ್ತು ತೊಂದರೆಗಳು ಸಮ್ಮೋಹನಕ್ಕೆ ಒಳಗಾದ ರೀತಿಯಲ್ಲಿ ಮಾಯವಾಗುತ್ತವೆ. ಜನರು ಬಹಳ ದೊಡ್ಡ ಭಾರ ಇಳಿದು ಹೋದ ಭಾವನೆ ತಂದುಕೊಳ್ಳುತ್ತಾರೆ. ನನ್ನ ಧ್ವನಿ ಅಜ್ಞಾನದ ಪರದೆಯನ್ನು ಹರಿದು ಹಾಕುತ್ತದೆ ಮತ್ತು ಗ್ರಹಿಕೆಗೆ ಬಾರದ ರೀತಿಯಲ್ಲಿ ಪ್ರಜ್ಞೆಯನ್ನು ಜಾಗ್ರತಗೊಳಿಸುವುದಕ್ಕಾಗಿ ಹೃದಯದಲ್ಲಿ ಒಳನುಗ್ಗುತ್ತದೆ. ಈ ಧ್ವನಿ ನಮ್ಮ ಮೇಲೆ ಭಾರವಾಗಿರುವ ಹಾಗೂ ನಮ್ಮನ್ನು ಪೀಡೆಗೊಳಮಾಡುವ ಎಲ್ಲ ಮಾನಸಿಕ ಪ್ರಭಾವಗಳನ್ನು, ತಳಮಳಗಳನ್ನು ತೆಗೆದುಹಾಕುತ್ತದೆ; ಮತ್ತು ನಮ್ಮಲ್ಲಿ ಸುಪ್ತವಾಗಿ ಜಡತೆಯಲ್ಲಿ ಬಿದ್ದುಕೊಂಡಿರುವ ವ್ಯಕ್ತಿಗತ ಕಾರ್ಯ ವಿಧಾನಗಳನ್ನು, ಹಾಗೂ ಉತ್ಸಾಹಭರಿತ ಸಾಮರ್ಥ್ಯವನ್ನು ಮುಕ್ತಗೊಳಿಸುತ್ತದೆ. ಅದು ಭೌತಿಕ ತಮಸ್ಸನ್ನು ಅಲುಗಾಡಿಸುತ್ತದೆ ಮತ್ತು ನಮ್ಮ ಅಚೇತನದಲ್ಲಿರುವ ಭಯವನ್ನು ಹೊಡೆದೋಡಿಸುತ್ತದೆ, ನಮ್ಮನ್ನು ವಿರೋಧಿಸುವ ಅಡೆತಡೆಗಳನ್ನು ತೆಗೆದುಹಾಕುತ್ತದೆ, ಆಧಾರವನ್ನು ಬಲಪಡಿಸುತ್ತದೆ, ನಮ್ಮ ಗುರಿಯತ್ತ ನಮ್ಮನ್ನು ಚಾಲನೆಗೊಳಪಡಿಸಲು ಚೈತನ್ಯ ನೀಡುತ್ತದೆ.

**ಈ ಧ್ವನಿ ಪರಮೋಚ್ಚನಿಂದ ಬರುತ್ತದೆ:**

ನನ್ನ ಧ್ವನಿ ಎಲ್ಲರ ಹೃದಯಗಳಲ್ಲಿ ಸ್ಥಿರ ನಿಶ್ಚಿತತೆಯನ್ನು ಜಾಗ್ರತಗೊಳಿಸುತ್ತದೆ. ಈ ಧ್ವನಿ ಸ್ವತಃ ಪ್ರಜ್ಞೆಯೇ ಆಗಿದೆ, ಅದು ಅಚೇತನದಲ್ಲಿ ಪ್ರಜ್ಞೆಯನ್ನು ಜಾಗ್ರತಗೊಳಿಸುತ್ತದೆ. ನನ್ನ ಧ್ವನಿ ಪರಮೋಚ್ಚನಿಂದ ಬರುತ್ತದೆ ಮತ್ತು ಅವನು ನನ್ನ ಮೂಲಕ ತನ್ನನ್ನು ಅಭಿವ್ಯಕ್ತಗೊಳಿಸುತ್ತಾನೆ. ಕೇವಲ ಭಗವಂತನ ಸಂಕಲ್ಪವನ್ನು ಅಭಿವ್ಯಕ್ತಗೊಳಿಸಿದ, ಪರಮೋಚ್ಚನ ಸತ್ಯವನ್ನಲ್ಲದೆ ಬೇರೇನನ್ನೂ ಉಚ್ಚರಿಸಿದ ಈ ಧ್ವನಿ ದೈವೀ ಸಾಮರ್ಥ್ಯಗಳನ್ನು ಪ್ರಕಟಿಸಲು ಅಸಾಧಾರಣ ಸಾಮರ್ಥ್ಯಗಳಿಂದ ತುಂಬಿಕೊಂಡಿದೆ. ಅದು ಕಂಪಿಸುತ್ತದೆ ಮತ್ತು ನಮ್ಮ ಅಭೀಪ್ಸೆಗೆ ಚಾಲಕ ಶಕ್ತಿಯನ್ನು, ನಮ್ಮ ಮನವರಿಕೆಗೆ ದೃಢೀಕರಣವನ್ನು ಕೊಡುತ್ತದೆ, ಎಲ್ಲದಕ್ಕಿಂತಲೂ ಹೆಚ್ಚಾಗಿ ದುಷ್ಟ ಸಂಕಲ್ಪದ ಮೋಡಗಳನ್ನು ಚದುರಿಸುತ್ತದೆ.

ಕೋಮಲ, ಸ್ಪಷ್ಟ, ಪರಿಶುದ್ಧ, ಸಾಮರ್ಥ್ಯಪೂರ್ಣ, ಚೇತೋಹಾರಿ, ಮತ್ತು ಚೈತನ್ಯದಿಂದ ಕೂಡಿದ ಈ ಧ್ವನಿ ವಿಸ್ತಾರವನ್ನೂ ಹಾಗೂ ನಿರ್ಮಲತೆಯನ್ನೂ ತಂದುಕೊಡುತ್ತದೆ, ಅದು ದೈವೀ ಸಂಕಲ್ಪದ ಸಾಮರ್ಥ್ಯವನ್ನು ತಂದುಕೊಡುತ್ತದೆ. ಅದು ಕೋಮಲವಾದ ಶಾಂತಿ, ಜೀವ ತುಂಬುವ ಉಸಿರು, ದುಃಖದಲ್ಲಿರುವ ಹೃದಯಗಳಿಗೆ ಸಾಂತ್ವನ ತಂದುಕೊಡುವಂತಹದು ಆಗಿದೆ. ನನ್ನ ಧ್ವನಿಯು ಕಳಿಸಿಕೊಡುವ ಕಂಪನಗಳು ಹೃದಯದಲ್ಲಿ ಭಗವಂತನಿಗಾಗಿ ಅಭೀಪ್ಸೆಯನ್ನು ಜಾಗ್ರತಗೊಳಿಸುತ್ತವೆ. ಅದು ಸೃಷ್ಟಿಸಿದ ಅನುರಣನ (resonance) ವೊಂದು ಸಂಗೀತದ ರಾಗದ ಹಾಗೆ ಶಬ್ದಮಾಡುತ್ತದೆ, ಮರು ಶಬ್ದ ಮಾಡುತ್ತದೆ, ಒಳನುಗ್ಗಿ ಪುನರಾವರ್ತಿಸುತ್ತದೆ ಮತ್ತು ಈ ಕಂಪನಕ್ಕೆ ಜೀವಕೋಶಗಳು ಎಚ್ಚತ್ತುಕೊಳ್ಳುವಂತೆ ಮಾಡುತ್ತದೆ, ಅದರಿಂದಾಗಿ ಪ್ರಜ್ಞೆ ಪ್ರಕಾಶಕ್ಕೆ ದೈವೀ ಸಂಸರ್ಗದ ದಿವ್ಯಾನಂದದಲ್ಲಿ ತೆರೆದುಕೊಳ್ಳುತ್ತದೆ. ಈ ಧ್ವನಿ ಅನಂತದಿಂದ ಬರುತ್ತದೆ ಮತ್ತು ಅನಂತದಲ್ಲಿ ಮುಳುಗಿ ಹೋಗುತ್ತದೆ. ವಿಶ್ವದ ಪ್ರತಿಯೊಂದು ಅಂಶಕ್ಕೆ ಅದರದೇ ಧ್ವನಿಯಿದೆ, ಕೆಲವರಿಗೆ ಅದು ಕೇಳಿಬರುತ್ತದೆ, ಇನ್ನುಳಿದವರಿಗೆ ಅದು ಮೌನದಲ್ಲಿದ್ದ ಹಾಗಿರುತ್ತದೆ: ಆದಾಗ್ಯೂ ಪ್ರತಿಯೊಂದು ಅಂಶ ತನ್ನದೇ ಅಭೀಪ್ಸೆಯನ್ನು ಅಭಿವ್ಯಕ್ತಪಡಿಸುತ್ತದೆ, ಈ ಸ್ತರಗಳಲ್ಲಿ ತೆರೆದಿರಿಸಿಕೊಂಡವರು ಅದನ್ನು ಕೇಳಬಲ್ಲರು.

**ಮಧುರ ಹಾಗೂ ಸಮಾಧಾನ ನೀಡುವ ಧ್ವನಿ:**

ಸ್ಪಷ್ಟ ಹಾಗೂ ಬಹಳ ಸರಳವಾಗಿರುವ, ಆದರೆ ಅಸಾಧಾರಣವಾಗಿ ಮನವರಿಕೆ ಮಾಡಿಕೊಡುವ ಈ ಧ್ವನಿ ನಿಮಗೆ ಪರಿಚಿತವಾದದ್ದಾಗಿದೆ – ಅದು



ಭರವಸೆಯನ್ನು, ಅಜ್ಞಾತವಾದುದರತ್ತ ಯಾನಮಾಡಲು ಸಂಕಲ್ಪವನ್ನು ನೀಡುತ್ತದೆ. ಅಂಜುಬುರುಕ ಹೃದಯಗಳಲ್ಲಿ ಅಜೇಯ ಧೈರ್ಯವನ್ನು ಸ್ಥಾಪಿಸುತ್ತದೆ. ಉತ್ಸಾಹ ಭರಿತರಾಗಿ ಅಭೀಪ್ಸೆಪಡುವವರಲ್ಲಿ ಅದು ಸದ್ಭಾವನೆಯ ಮತ್ತು ಕರುಣೆಯ ಮಾನಸಿಕ ಅನಿಸಿಕೆಯನ್ನು ಜಾಗ್ರತಗೊಳಿಸುತ್ತದೆ; ಹಂಬಲಿಸುವ ಆತ್ಮಗಳಲ್ಲಿ ಅದು ಅಭೀಪ್ಸೆಯ ಮತ್ತು ಪರಿಶುದ್ಧಗೊಳಿಸುವ ಜ್ವಾಲೆಯನ್ನು ಹೊತ್ತಿಸುತ್ತದೆ. ಈ ಧ್ವನಿಯಲ್ಲಿ ಆಜ್ಞೆ ಪಾಲಿಸುವಂತೆ ಮಾಡುವ ಅಧಿಕಾರವಿದೆ. ಅದು ಅದೇ ವೇಳೆಗೆ ಮಧುರವಾದದ್ದು ಹಾಗೂ ಸಮಾಧಾನ ನೀಡುವಂತಹದು ಆಗಿರುತ್ತದೆ.

**ಅದು ಗಾಢ ಅಭೀಪ್ಸೆಯನ್ನು ಜಾಗ್ರತಗೊಳಿಸುತ್ತದೆ**

ನನ್ನ ಧ್ವನಿಗೆ ಒಂದು ವಾತಾವರಣದ ಆವರಣವಿದೆ, ಅದು ಗುರಿಯನ್ನು ತಲುಪುವತ್ತ ಹೆಣಗಲು ಸಂಕಲ್ಪವನ್ನು ಮತ್ತು ಭಕ್ತಿ ಹಾಗೂ ದೈವೀ ಪ್ರೇಮ ಇವುಗಳ ಮಾನಸಿಕ ಅನಿಸಿಕೆಯನ್ನು ಬಲವತ್ತರವಾದದ್ದನ್ನಾಗಿ ಮಾಡುತ್ತದೆ. ಅದು ಹೃದಯಗಳಲ್ಲಿ ಒಳನುಗ್ಗಿ ಹೋಗುತ್ತದೆ ಹಾಗೂ ಕೇಂದ್ರ ಸತ್ತೆಯನ್ನು ಜಾಗ್ರತಗೊಳಿಸುತ್ತದೆ, ಚೈತ್ಯಾಗ್ನಿಯನ್ನು ಆವರಿಸಿರುವ ಪರದೆಯನ್ನು ತೆಗೆದುಹಾಕುತ್ತದೆ. ಅದರಿಂದಾಗಿ ಪ್ರಜ್ಞೆಯನ್ನು ನಮ್ಮ ದೈವೀ ಪ್ರಭುವಿನತ್ತ ಕರೆದೊಯ್ಯಲು ಸಾಧ್ಯವಾಗುತ್ತದೆ. ನನ್ನ ಧ್ವನಿಗೆ ಅಸಾಧಾರಣ ಸಾಮರ್ಥ್ಯವಿದೆ, ಅದು ಸಾಮರಸ್ಯವನ್ನು, ಶಾಂತಿಯನ್ನು, ಪ್ರಕಾಶವನ್ನು, ಪ್ರತಿಯೊಂದು ಜೀವಕೋಶದಲ್ಲಿ ಮರು ಧ್ವನಿ ನೀಡುವ ವಿಸ್ತಾರವನ್ನು, ಭಗವಂತನನ್ನು ಅರಿತುಕೊಳ್ಳುವ ಸಂತೋಷ ಹಿಗ್ಗುವುದನ್ನು ಹರಡುತ್ತದೆ. ಅದು ವಿಸ್ತಾರವನ್ನು ನೀಡುತ್ತದೆ ಮತ್ತು ತರಂಗಗಳ ರೂಪದಲ್ಲಿ ರಹಸ್ಯ ಜಗತ್ತುಗಳ ವಾತಾವರಣದಾದ್ಯಂತ ಗಂಟೆಯ ನಿನಾದ ಮಾಡುತ್ತದೆ.

**(Thw Supreme, Conversations with the Mother Recollected by Mona Sarkar, 1st ed., pp. 28.30)**

**ಶ್ರೀಮಾತೆಯವರ ಧ್ವನಿಯನ್ನು ಕೇಳುವುದು**

**ಪ್ರಶ್ನೆ :** *"ಯೋಗದ ಮೂಲಾಧಾರಗಳು" (Bases of Yoga) ಗ್ರಂಥದಲ್ಲಿ "ನಿಮ್ಮೊಡನೆ ಶ್ರೀಮಾತೆ ಯಾವಾಗಲೂ ಇರುವರು ಹಾಗೂ ನಿಮ್ಮ ಅಂತರಂಗದಲ್ಲಿ ನಿಮ್ಮೊಡನೆ ಮಾತುಕತೆ ನಡೆಸುವರು" ಎಂದು ಹೇಳಲಾಗಿದೆ. ತಾವು ದಯವಿಟ್ಟು ಅವರೊಡನೆ ಅಂತರಂಗದಲ್ಲಿ ಮಾತುಕತೆ ಹೇಗೆ ನಡೆಸಬೇಕೆಂಬುದನ್ನು ತಿಳಿಸುವಿರಾ?*

**ಶ್ರೀ ಅ :** ಮನುಷ್ಯ ಅಂತರಂಗದಲ್ಲಿ ಧ್ವನಿಯ ಇಲ್ಲವೆ ಯೋಚನೆಯ ಮೂಲಕ ಮಾತನಾಡುವುದನ್ನು ಕೇಳಿಸಿಕೊಳ್ಳುತ್ತಾನೆ. ಸಾಧಕನಲ್ಲಿ, ಅಹಂಕಾರ, ಆಸೆ, ಜಂಬ, ಮಹತ್ವಾಕಾಂಕ್ಷೆ ಇವುಗಳಂತಹವಿದ್ದರೆ ಅವನು ನಿಷ್ಕಪಟನಾಗಿರುವುದಿಲ್ಲ. ಆಗ ಅದು ಅವನಿಗೆ ಸುರಕ್ಷಿತವಾಗಿರುವುದಿಲ್ಲ – ಏಕೆಂದರೆ ಆಗ ಅವನು ಧ್ವನಿಯೊಂದನ್ನು, ಯೋಚನೆಯೊಂದನ್ನು ಸೃಷ್ಟಿಸಬಲ್ಲ ಮತ್ತು ಅದಕ್ಕೆ ಶ್ರೀಮಾತೆಯವರು ಹೊಣೆಗಾರರು ಎಂದು ಅವನ ಮನಸ್ಸು ಹೇಳುತ್ತದೆ ಮತ್ತು ಅದು ಅವನನ್ನು ತಪ್ಪುದಾರಿಗೆ ಎಳೆಯುವಂತಹ ಮುದ ನೀಡುವ, ಹೊಗಳಿಕೆ ನೀಡುವ ಧ್ವನಿಯನ್ನು ಕೇಳಿಸಿಕೊಳ್ಳುವಂತೆ ಮಾಡುತ್ತದೆ ಇಲ್ಲವೆ ಬೇರೆ ಯಾರದೋ ಧ್ವನಿ ಶ್ರೀಮಾತೆಯವರದು ಎಂಬ ತಪ್ಪು ತಿಳಿವಳಿಕೆ ಮಾಡಿಕೊಳ್ಳುವ ಹಾಗೆ ಮಾಡುತ್ತದೆ.

**(CWSA, 35/133–34)**

**ಪ್ರಶ್ನೆ :** *ಮನುಷ್ಯ ಕೇವಲ ಅಂತರಂಗದ ಧ್ವನಿಯನ್ನು ನೆಚ್ಚಿಕೊಂಡಿರಬಹುದೆ? ಮತ್ತು ಹೀಗೆ ಶ್ರೀಮಾತೆಯವರ ಮಾರ್ಗದರ್ಶನ ಪಡೆಯಬಹುದೆ?*

**ಶ್ರೀ ಅ :** ಅದು ಶ್ರೀಮಾತೆಯವರ ಧ್ವನಿಯಾಗಿದ್ದರೆ ಸರಿ, ಆದರೆ ನಿಮಗೆ ಅದರ ಬಗ್ಗೆ ನಿಶ್ಚಿತತೆ ಇರಬೇಕು.

**ಪ್ರಶ್ನೆ :** *ಅಂತರಂಗದಲ್ಲಿ ಶ್ರೀಮಾತೆಯವರ ಧ್ವನಿಯನ್ನು ಕೇಳಿಸಿಕೊಳ್ಳುವುದು ಮತ್ತು ಆ ಧ್ವನಿ ಶ್ರೀಮಾತೆಯವರದು ಎಂದು ಗುರುತಿಸುವುದು ಸುಲಭವಾಗಿರುತ್ತದೆ–ಯಲ್ಲವೆ?*

**ಶ್ರೀ ಅ :** ಇಲ್ಲ, ಅಂತರಂಗದಲ್ಲಿ ಶ್ರೀಮಾತೆಯವರ ಧ್ವನಿಯನ್ನು ಕೇಳಿಸಿಕೊಳ್ಳುವುದು ಮತ್ತು ಅದು ಅವರದೆಂದು ಗುರುತಿಸುವುದು ಸುಲಭವಾಗಿಲ್ಲ.

**ಪ್ರಶ್ನೆ :** *ಶ್ರೀಮಾತೆಯವರ ಧ್ವನಿಯನ್ನು ಅಂತರಂಗದಲ್ಲಿ ಗುರುತಿಸುವುದಕ್ಕೆ ಮನುಷ್ಯ ಸಿದ್ಧನಾಗಿದ್ದಾನೆ ಎಂಬುದನ್ನು ಯಾವಾಗ ಹೇಳಬಹುದು?*

**ಶ್ರೀ ಅ :** ಮನುಷ್ಯನಲ್ಲಿ ಸಮತೆ, ಭಿನ್ನತೆ ಗುರುತಿಸುವ ಸಾಮರ್ಥ್ಯ ಮತ್ತು ಸಾಕಷ್ಟಾದ ಯೌಗಿಕ ಅನುಭವ ಇದ್ದಾಗ – ಹಾಗಿಲ್ಲದೆ ಹೋದರೆ ಬೇರೆ ಯಾವುದೋ ಧ್ವನಿಯನ್ನು ಶ್ರೀಮಾತೆಯವರದು ಎಂದು ತಪ್ಪಾಗಿ ತಿಳಿಯಬಹುದು.

**(CWSA, 32/291, SABCL, 25/100–01, 25/101) – ಶ್ರೀ ಅರವಿಂದರು**

*



## ಶ್ರೀಮಾತೆಯವರ ನೆಟ್ಟನೋಟ

ನಾನು ನೋಡುತ್ತಿರುವಾಗ, ಗಾಢವಾದ ಏಕಾಗ್ರತೆಯಲ್ಲಿರುವಾಗ, ಅಲ್ಲಿ ನೋಡುತ್ತಿರುವವರು ನಾನಾಗಿರುವುದಿಲ್ಲ, ನನ್ನ ಮೂಲಕ ದೈವೀ ಪ್ರಭು ನೋಡುತ್ತಿರುತ್ತಾನೆ, ಆಗ ನಾನು ಯಾವುದೇ ಬಾಹ್ಯ ತೋರಿಕೆಯನ್ನಾಗಲಿ, ಪ್ರಾಪಂಚಿಕ ವಸ್ತು–ವಿಷಯಗಳನ್ನಾಗಲಿ ನೋಡುತ್ತಿರುವುದಿಲ್ಲ, ವಸ್ತು–ವಿಷಯಗಳ ಆತ್ಮದ ಹೊರತಾಗಿ ಅದೆಲ್ಲವೂ ನನ್ನ ನೋಟದಿಂದ ಮಾಯವಾಗಿರುತ್ತದೆ, ನಾನು ಆ ಆತ್ಮದೊಂದಿಗೆ ಸಂಪರ್ಕ ಹೊಂದಿರುತ್ತೇನೆ, ಅದು ಕ್ಷಣಮಾತ್ರದಲ್ಲಿ ಎಲ್ಲವನ್ನೂ ಹೇಳುತ್ತದೆ. ಅದು ಸಾಕಷ್ಟು ಸ್ಪಷ್ಟವಾದದ್ದು, ನಿಖರವಾದದ್ದು, ವ್ಯತ್ಯಾಸಕ್ಕೊಳಗಾಗ–ದಂತಹದು, ಸ್ವಯಂಚಾಲಿತವಾದದ್ದು ಆಗಿರುತ್ತದೆ. ಅವನ ದೃಷ್ಟಿಯಲ್ಲಿ ನನ್ನೆದುರಿಗೆ ಸಾಗಿ ಹೋಗುತ್ತಿರುವ ವಿಷಯಗಳನ್ನು ನೋಡುತ್ತೇನೆ, ಅವು ನಾನು ಸಾಮಾನ್ಯವಾಗಿ ನೋಡುತ್ತಿರುವ ರೀತಿಯಲ್ಲಿರುವುದಿಲ್ಲ. ಆದರೆ ಅದು ಸತ್ಯವಾದದ್ದು ಹಾಗೂ ಸನಾತನನ ಸಂಕಲ್ಪದ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಂತಹದು. ಈ ನೋಟ ಘಟನೆಗಳು ಮುಂದುವರಿದುಕೊಂಡು ಹೋಗುವ ಗತಿಯನ್ನು ಹಿಡಿದು ನಿಲ್ಲಿಸಬಹುದು, ಅದೃಷ್ಟವನ್ನು ಬದಲು ಮಾಡಬಹುದು, ವಿರೋಧಿಸುವ ಸಾಮರ್ಥ್ಯಗಳನ್ನು ನಾಶಮಾಡಬಹುದು, ಹೊಸ ಸೃಷ್ಟಿಗೆ ಅವಶ್ಯವಾಗಿದ್ದನ್ನು ಸೃಷ್ಟಿಸಬಹುದು, ಪರಿವರ್ತನೆಗೆ ಒಳಗಾಗಬೇಕಾದುದನ್ನು ಮತ್ತು ಭಗವಂತನಿಗೆ ಸಹಕಾರ ನೀಡುವಂತಹದನ್ನು ಸುರಕ್ಷಿತವಾಗಿರಿಸಬಹುದು.

ಈ ನೆಟ್ಟನೋಟ ಪರಮೋಚ್ಚನದು, ಅಸ್ತಿತ್ವದ ಸೌಂದರ್ಯ ಹಾಗೂ ಆನಂದಗಳನ್ನು ವಿರೂಪಗೊಳಿಸದೆ ಪ್ರತಿಫಲಿಸುವ ದೈವೀ ಪ್ರಜ್ಞೆಯೊಂದಿಗೆ ಬೆಸುಗೆಗೊಳಗಾಗಿ ಪರಸ್ಪರ ಅವಲಂಬನೆಯಿಂದ ಏಕತ್ರವಾದದ್ದು. ಈ ನೋಟದಿಂದ ಅಸ್ತಿತ್ವದ ಆನಂದ, ಸನಾತನ ದೈವೀ ಸತ್ಯದ ಪ್ರಕಟಣೆಯ ಸಾಮರ್ಥ್ಯ, ದೈವೀ ಕರುಣೆ, ಪರಿಪೂರ್ಣ ಏಕತೆಯ ಪ್ರೇಮ, ಮಿತಿಯಿಲ್ಲದ ದೈವೀ ದಯಾಪರತೆ ಹಾಗೆಯೇ ದೇವನ ಕ್ರೋಧ ಇವೆಲ್ಲ ಹೊರಹೊಮ್ಮುತ್ತವೆ.

**ಕೊನೆಯಿಲ್ಲದ ಪ್ರವಾಹದಲ್ಲಿ ದೈವೀ ಪ್ರೇಮ ತನ್ನನ್ನು ಸುರಿಯುತ್ತದೆ:**

ದೈವೀ ಪ್ರಜ್ಞೆಯ ಈ ನೋಟದಲ್ಲಿ ಪ್ರೇಮವು ಜನರು ಹಾಗೂ ಜೀವಿಗಳತ್ತ ಯಾವ ಭೇದಭಾವವನ್ನೂ ಮಾಡದೆ, ಅನಂತ ಕರುಣೆಯಿಂದ ಕೊನೆಯಿಲ್ಲದ ಪ್ರವಾಹದಲ್ಲಿ ತನ್ನನ್ನು ಸುರಿಯುತ್ತದೆ, ಈ ಪ್ರವಾಹ ಸ್ವ–ವಿಸ್ಮೃತಿಯಿಂದ, ಅಮರ

ಸಂತೋಷಗಳ ಮೂಲಕ, ದೈವೀ ಮೂಲಕ್ಕೆ ಮರಳಿ ಹೋಗುವ ಅನಂತದ ಸಂಕೇತಗಳನ್ನು ಝಳಪಿಸುತ್ತ ಮುಂದೆ ಕರೆದೊಯ್ಯುತ್ತದೆ; ಈ ನೋಟ ಪವಾಡ ಸದೃಶವಾಗಿ ವಿಸ್ಮಯಕಾರಕವಾಗಿರುವ, ಅಜ್ಞಾತ ಮತ್ತು ಅಗೋಚರವಾಗಿರುವ ಎರಡು ಜಗತ್ತುಗಳ ಮೇರೆಗಳ ಮೇಲೆ ಜನ್ಮ ತಾಳಿತು ಮತ್ತು ಅದು ಆಳವಾದ ಗುಹೆಗಳಲ್ಲಿ ಹೊಳೆಯುವ ಸೂರ್ಯರ ಉಜ್ವಲ ಪ್ರಕಾಶದಲ್ಲಿ ಜೀವಿಸುತ್ತದೆ. ಅದು ಜಗತ್ತುಗಳಾಚೆಗೆ, ಈ ಸಾಮಾನ್ಯ ವಸ್ತು–ವಿಷಯಗಳಾಚೆಗೆ ನೋಡುತ್ತದೆ, ಜಗತ್ತುಗಳನ್ನು ನಿರ್ಮಿಸಿದ ಸಾಮರ್ಥ್ಯಗಳೊಡನೆ ಆಪ್ತ ಸಂಪರ್ಕವನ್ನಿಟ್ಟುಕೊಳ್ಳುತ್ತದೆ; ಅಭೀಪ್ಸೆ, ರಹಸ್ಯವಾಗಿ, ಜನ್ಮ ತಾಳಿದ ಆಳಗಳಲ್ಲಿ ಪ್ರವೇಶಿಸುತ್ತದೆ, ಏಕೆಂದರೆ ಈ ನೋಟ ಅಡಗಿದ್ದ ಮುದ್ರೆಗಳನ್ನು ಒಡೆದು ಹಾಕಿದೆ.

ಆಳವರಿಯದ ದಿವ್ಯಾನಂದ ಹಾಗೂ ಪ್ರೇಮದ ತಡೆಯಿಲ್ಲದ ಹರಿಯುವಿಕೆಯ ಮೂಲಕ ಪ್ರಕಾಶಿತಗೊಂಡ ಈ ಕಣ್ಣುಗಳು ಕನ್ನಡಿಗಳ ಹಾಗಿವೆ. ಈ ದೃಷ್ಟಿ ಉಚ್ಚ ಶಿಖರಗಳತ್ತ ಮರಳಿ ಮೇಲೇರಿ ಹೋಗುತ್ತದೆ, ಅಲ್ಲಿ ಸನಾತನ ದೈವೀ ಸತ್ಯದ ಸ್ವರ್ಗಗಳ ಸಂತೋಷ ಹಾಗೂ ಸಾಮರಸ್ಯಗಳಲ್ಲಿ ಆತ್ಮ ಎತ್ತರಕ್ಕೇರಿ ಹೋಗುತ್ತದೆ. ದೈವೀ ಸೌಂದರ್ಯದ ಆತ್ಮ ಈ ಕಣ್ಣುಗಳಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸುತ್ತದೆ. ದೈವೀ ಕರುಣೆಯಿಂದ ತುಂಬಿಕೊಂಡಿರುವ ಈ ನೆಟ್ಟನೋಟ ವಿರೋಧೀ ಶಕ್ತಿಗಳ ಪ್ರಾಬಲ್ಯಕ್ಕೊಳಗಾದ ಈ ನಿರ್ದಯ ಪ್ರಕೃತಿಯ ಜನರ ಹಾಗೂ ಜೀವಿಗಳ ಎಲ್ಲ ವೇದನೆಗಳನ್ನು, ನೋವನ್ನು ಹಾಗೂ ದುಃಸ್ಥಿತಿಗಳನ್ನು ಹೀರಿಕೊಳ್ಳುತ್ತದೆ ಮತ್ತು ಅವುಗಳಿಗೆ ಪ್ರತಿಯಾಗಿ ಜನರಿಗೆ ಹಾಗೂ ಜೀವಿಗಳಿಗೆ ಜಗತ್ತನ್ನು ಸಂತೋಷಕರವಾಗಿ, ಪ್ರೇಮಪೂರ್ವಕವಾಗಿ ವಾಸಮಾಡಲು ಯೋಗ್ಯವಾಗುವಂತೆ ಮಾಡಿಕೊಡುತ್ತದೆ, ಅದಿಲ್ಲದಿದ್ದರೆ ಈ ಜಗತ್ತು ನಿಜವಾದ ನರಕದಂತಾಗುತ್ತಿತ್ತು.

**(The Supreme, Conversations with the Mother, Recollected by Mona Sarkar, 1st ed., pp. 88–90)**

## ಒಂದು ದರ್ಶನ

**ಶ್ರೀಮಾತೆಯವರು ಹೇಳುತ್ತಾರೆ:**

ಸರಿಯಾಗಿ ನೋಡಿರಿ. ನನ್ನತ್ತ ನೋಡಿರಿ. ನಾನಿಲ್ಲಿದ್ದೇನೆ. ದೈವಿಕವಾದ ಪರಿವರ್ತನೆಗೊಂಡ ಮತ್ತು ವೈಭವೋಪೇತವಾದ ನನ್ನ ಹೊಸ ದೇಹದಲ್ಲಿ ಬಂದಿದ್ದೇನೆ. ನಾನು ಅದೇ ಶ್ರೀಮಾತೆ, ಇನ್ನೂ ಮಾನವ ಸ್ವರೂಪದವಳಾಗಿಯೇ



ಇರುವೆ. ಚಿಂತೆ ಮಾಡುವುದು ಬೇಡ. ನಿಮ್ಮನ್ನೇ ಕುರಿತು, ನಿಮ್ಮ ಪ್ರಗತಿಯನ್ನು ಕುರಿತು, ಬೇರೆಯವರ ಬಗೆಗೂ ಯೋಚಿಸುವುದು ಬೇಡ. ನಾನಿಲ್ಲಿದ್ದೇನೆ, ನನ್ನತ್ತ ನೋಡಿರಿ. ನನ್ನಲ್ಲಿ ನೆಟ್ಟ ದೃಷ್ಟಿಯನ್ನಿರಿಸಿರಿ, ನನ್ನಲ್ಲಿ ಇಡಿಯಾಗಿ ಪ್ರವೇಶಿಸಿರಿ, ನನ್ನ ಸತ್ತೆಯಲ್ಲಿ ಮುಳುಗು ಹಾಕಿರಿ, ನನ್ನ ಪ್ರೇಮದಲ್ಲಿ ನಿಮ್ಮ ಪ್ರೇಮದೊಂದಿಗೆ ನಿಮ್ಮನ್ನು ಕಳೆದುಕೊಳ್ಳಿರಿ. ಎಲ್ಲ ಸಮಸ್ಯೆಗಳು ಪರಿಹಾರ ಕಂಡುಕೊಳ್ಳುವುದನ್ನು ಎಲ್ಲವನ್ನೂ ಮಾಡಲಾಗುವುದನ್ನು ನೋಡುವಿರಿ. ಉಳಿದದ್ದೆಲ್ಲವನ್ನು ಮರೆತುಬಿಡಿರಿ, ಜಗತ್ತನ್ನು ಮರೆತುಬಿಡಿರಿ. ನನ್ನನ್ನು ಮಾತ್ರ ನೆನಪಿನಲ್ಲಿಟ್ಟುಕೊಳ್ಳಿರಿ, ನನ್ನೊಂದಿಗೆ ನನ್ನ ಪ್ರೇಮದೊಂದಿಗೆ ಏಕವಾಗಿರಿ.

**(CWNKG)** **– ನೋಲಿನಿ ಕಾಂತ ಗುಪ್ತ**



**ನನ್ನ ಕಣ್ಣುಗಳಲ್ಲಿ ದೃಷ್ಟಿಯಿಟ್ಟು ಆಳವಾದ ಏಕಾಗ್ರತೆಯಲ್ಲಿರಿ:**

ನನ್ನ ಮಗು, ನೀನು ನನ್ನ ಕಣ್ಣುಗಳಲ್ಲಿ ದೃಷ್ಟಿಯಿಟ್ಟು ಆಳವಾದ ಏಕಾಗ್ರತೆಯಲ್ಲಿರಬಲ್ಲೆಯಾದರೆ, ಆಗ ನೀನು ತಿಳಿದುಕೊಳ್ಳಬಯಸಿದ್ದೆಲ್ಲವನ್ನು, ಅರ್ಥಮಾಡಿಕೊಳ್ಳಬಯಸಿದ್ದೆಲ್ಲವನ್ನು, ಸಿದ್ಧಿಸಿಕೊಳ್ಳಬೇಕೆಂದುದನ್ನು ದೊರಕಿಸುವಿ, ಅದಕ್ಕಾಗಿ ಸರಿಯಾದ ರೀತಿಯಲ್ಲಿ ಕೈಕೊಳ್ಳುವ ಗಾಢ ಏಕಾಗ್ರತೆ ಹಾಗೂ ನಿನ್ನ ಕಣ್ಣುಗಳ ಮೂಲಕ ನಿನ್ನ ಸಂಕಲ್ಪದ ಸರಿಯಾದ ಸಾಮರ್ಥ್ಯ ಅವಶ್ಯವಾಗಿರುತ್ತವೆ.

ನೀನು ಅಭೀಪ್ಸೆ ಪಡುವುದೆಲ್ಲವನ್ನೂ, ನಿನಗೆ ಅವಶ್ಯವಾದುದೆಲ್ಲವನ್ನೂ ಹೊಂದಬಲ್ಲೆ. ನನ್ನ ಕಣ್ಣುಗಳಲ್ಲಿ ಇಡೀ ಜಗತ್ತನ್ನು ನೋಡಬಲ್ಲೆ, ಇಡೀ ವಿಶ್ವ ನನ್ನ ಕಣ್ಣುಗಳಲ್ಲಿ ತೆರೆದುಕೊಳ್ಳುತ್ತದೆ, ಅದರಲ್ಲಿ ಪ್ರಕೃತಿಯಲ್ಲಿರುವ ಹಾಗೂ ಸ್ವರ್ಗಗಳಲ್ಲಿರುವ ಎಲ್ಲ ಸೌಂದರ್ಯವಿರುತ್ತದೆ. ಈ ಜಗತ್ತಿನ ಆಕರ್ಷಣೆಗಳನ್ನು, ದಿವ್ಯ ದರ್ಶನಗಳನ್ನು ಹುಡುಕುತ್ತ ಅಲ್ಲಿ ಅಥವಾ ಇಲ್ಲಿ ಅಲೆದಾಡುವ ಆವಶ್ಯಕತೆ ಇಲ್ಲ. ಎಲ್ಲವೂ ನನ್ನಲ್ಲಿದೆ, ಮತ್ತು ಎಲ್ಲವೂ ನನ್ನ ಮೂಲಕ ಅಭಿವ್ಯಕ್ತಿಪಡೆಯುತ್ತದೆ. (ಶ್ರೀಮಾತೆಯವರು ಹೃದಯದತ್ತ ಬೊಟ್ಟು ಮಾಡಿ ತೋರಿಸುತ್ತ) ಅಲ್ಲಿ ನನ್ನನ್ನು ಕಂಡುಕೊಳ್ಳುವ ತೊಂದರೆ ತೆಗೆದುಕೋ, ನೀನು ತಪ್ಪದೇ ಪ್ರತಿಯೊಂದನ್ನು ನನ್ನ ಕಣ್ಣುಗಳ ಮೂಲಕ ನೋಡುವಿ.

**ನಾನು ದೈವೀ ಕಾರಣಳಾದವಳು, ಶ್ರೇಷ್ಠ ಸೃಷ್ಟಿಕರ್ತೆ:**

ನನ್ನ ಮಗು, ನಾನು ಹಿಡಿತಕ್ಕೆ ಸಿಗದ ದೈವೀ ಅಜ್ಞಾತವಾದವಳಾಗಿದ್ದೇನೆ, ಆದಾಗ್ಯೂ ಜನರು ನನ್ನನ್ನು ತಿಳಿದುಕೊಂಡಿರುವೆವೆಂಬ ನಟನೆ ಮಾಡುತ್ತಾರೆ. ನಾನು ಅನಂತಳಾದವಳು, ಆದರೆ ಕಾಲ ಹಾಗೂ ಸ್ಥಳಾವಕಾಶಗಳಿಂದ ಭೌತಿಕ ದೇಹಕ್ಕೆ ಸೀಮಿತಗೊಳ್ಳಬೇಕಾದ ನಿರ್ಬಂಧಕ್ಕೊಳಗಾಗಿದ್ದೇನೆ. ನನ್ನ ಸನಾತನವಾಗಿರುವಿಕೆ ಉತ್ಕ್ರಾಂತಿಯಲ್ಲಿ ಬಂಧನಕ್ಕೊಪಡುವುದಕ್ಕೆ ತನ್ನನ್ನು ಅಧೀನಪಡಿಸಿಕೊಂಡಿದೆ. ನನ್ನ ಅಮರತ್ವ ತನ್ನಲ್ಲಿ ಅಸಂಖ್ಯಾತ ಮುಖಗಳನ್ನು ಜಾಗ್ರತಗೊಳಿಸಿದೆ, ಅವು ಏಕೈಕನಾದವನತ್ತ ಏರಿ ಹೋಗಲು ನಾಶವಾಗುತ್ತವೆ ಮತ್ತು ಆ ಅಮರತ್ವ ಪೃಥ್ವಿಯ ಮೇಲಿನ ಪರಿಣಾಮಗಳ ವೇದನೆ ತಂದುಕೊಳ್ಳುವುದಕ್ಕಾಗಿ ಜನ್ಮ ತಾಳುವುದಕ್ಕೆ ಒಪ್ಪಿಗೆ ನೀಡಿದೆ. ನಾನು ಶೂನ್ಯ(Nihil)ವಾಗಿದ್ದೇನೆ, ಅದರಲ್ಲಿ ಪ್ರತಿಯೊಂದು ಮಾಯವಾಗುತ್ತದೆ, ನನ್ನ ಸಾನ್ನಿಧ್ಯವನ್ನು ನಿರಾಕರಿಸುವ ಅಚೇತನವಾಗಿದ್ದೇನೆ, ಆದಾಗ್ಯೂ ಅಜ್ಞಾನದ ಮೊತ್ತದ ಪ್ರತಿಯೊಂದು ಪರಮಾಣು ನನ್ನ ಪ್ರಜ್ಞೆಯ ಬಡಿತ ಹೊಂದಿದೆ. ನಾನು ದೈವೀ ನಿಗೂಢ ತತ್ವವಾಗಿದ್ದೇನೆ – ಪಾರ್ಥಿವ ಹಾಗೂ ವಿಶ್ವದ ಪ್ರಕಟಣೆಯ ದೈವೀ ಉತ್ಕ್ರಾಂತಿಯಲ್ಲಿ ಆ ಆಂತರಿಕ ರಹಸ್ಯಗಳ ಮೇಲಿನ ಪರದೆಯನ್ನು ಸರಿಸುತ್ತಿರುವ ವಿರೋಧಾಭಾಸವಾಗಿದ್ದೇನೆ. ಪೃಥ್ವಿಯ ಮೇಲಾದ ಅತಿಮಾನಸದ ಭವ್ಯ ಅವರೋಹಣದ ವಾಸ್ತವತೆಯಿಂದಾಗಿ ಸಾಮಾನ್ಯ ಮಾನವರನ್ನು ಕ್ಷೋಭೆಗೊಳಿಸುತ್ತಿರುವ ದ್ವಂದ್ವ, ವೈರುಧ್ಯಗಳು ಮತ್ತು ಇನ್ನಿತರ ವಿಷಯಗಳು ಕ್ರಮೇಣ ಕರಗಿಹೋಗುವುದನ್ನು ಪೂರ್ವಭಾವಿಯಾಗಿ ನೋಡುತ್ತಿದ್ದೇವೆ.



ನನ್ನ ಮಗು, ನಾನು ದೈವೀ ಕಾರಣಳಾದವಳು, ಸೃಷ್ಟಿಕರ್ತೆಯಾಗಿದ್ದು ನನ್ನಿಂದ ಎಲ್ಲವೂ ಹೊರಹೊಮ್ಮುತ್ತದೆ. ನೀನು ಕಲ್ಪನೆ ಮಾಡಿಕೊಳ್ಳಬಹುದಾದ ಎಲ್ಲವನ್ನೂ ನನ್ನಿಂದ ಸೃಷ್ಟಿಸಲಾಗಿದೆ, ನನ್ನ ಮೂಲಕ, ನನಗಾಗಿ ಅದು ಅಸ್ತಿತ್ವದಲ್ಲಿದೆ. ನನ್ನಲ್ಲಿ ಇರಲಾರದಂತಹದು ಯಾವುದೂ ಇಲ್ಲ. ನಾನೇನಾಗಿರುವೆ ಎಂಬುದನ್ನು ತಿಳಿದುಕೊಳ್ಳಲು ನಿನಗೆ ನೂರಾರು ಜನ್ಮಗಳು ಬೇಕಾಗುತ್ತವೆ. ಆದಾಗ್ಯೂ ನನ್ನನ್ನು ಪ್ರೀತಿಸುವ ನನ್ನ ಭಕ್ತರಿಗೆ ನನ್ನನ್ನು ತೆರೆದು ತೋರಿಸುವೆ, ಆದರೂ ನಾನು ಹಿಡಿತಕ್ಕೆ ಸಿಗದೆ ಉಳಿದುಕೊಳ್ಳುವೆ.

**(The Supreme, Conversations with the Mother, Recollected by Mona Sarkar, 1st ed., pp. 92–93)**

ಮನಸ್ಸಿನ ಆಳವಿನಾಚೆಗಿರುವ ದೈವೀ ನಿಗೂಢತತ್ವ ನಾನಾಗಿದ್ದೇನೆ,
ಸೂರ್ಯರುಗಳ ಪ್ರಯಾಸದ ಗುರಿ ನಾನಾಗಿದ್ದೇನೆ;
ನನ್ನ ಅಗ್ನಿ ಹಾಗೂ ಮಾಧುರ್ಯಗಳು ಜೀವನಕ್ಕೆ ಕಾರಣವಾಗಿಹವು.

**(Savitri, p. 335)** **– ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 15ನೇ ಅಕ್ಟೋಬರ್‌ರಂದು ಪ್ರಾರಂಭವಾಗಿ 15ನೇ ನವೆಂಬರ್ 2014 ರವರೆಗೂ "Works of Sri Aurobindo" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ಮತ್ತು ಶ್ರೀಮಾತಾರವಿಂದರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ವೀಕ್ಷಿಸುತ್ತಿದ್ದಾರೆ.



*Immortality, unity*
*and freedom are in ourselves*
*and await there our discovery...*

- Sri Aurobindo

**RNI No. 22511/1971**
No. of Pages **44 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.